ನಮ್ಮ ಮಾನಸ

ಸಂಪುಟ : 1 ಜೂನ್-ಆಗಸ್ಟ್ 2013 ಸಂಚಿಕೆ: 2 ಬೆಲೆ: 25/-



ನಮ್ಮ ಮಾನಸ

ಜೂನ್-ಆಗಸ್ಟ್ 2013
ಸಂಪುಟ : 1 ಸಂಚಿಕೆ : 2

Printed at
ILA Mudrana
No. 36, 40 Ft. Road, Raghavanagara,
New Timberyard Layout
Bangalore-26.
✆ : 26757159

ಚಂದಾ ವಿವರ

ಬಿಡಿಪ್ರತಿ	25–00 ರೂ.
ವಾರ್ಷಿಕ ಚಂದಾ (ವಿಶೇಷ ಸಂಚಿಕೆಯೊಂದಿಗೆ)	100–00 ರೂ.
ಸಂಸ್ಥೆಗಳಿಗೆ	150–00 ರೂ.

ಪ್ರಾಯೋಜಕರು:
ಬಿ.ಎಚ್. ರಮಾಕುಮಾರಿ
ಅನ್ನಪೂರ್ಣ ವೆಂಕಟನಂಜಪ್ಪ
ಹಾಗೂ
ಮಾನಸ ಬಳಗ

ನಮ್ಮ ಮಾನಸ
114/5, 9ನೇ ತಿರುವು, 2ನೇ ಮುಖ್ಯರಸ್ತೆ,
ಚಾಮರಾಜಪೇಟೆ, ಬೆಂಗಳೂರು – 560 018

ಚಂದಾಹಣವನ್ನು ಈ ವಿಳಾಸಕ್ಕೆ ಚೆಕ್ ಅಥವಾ ಡಿ.ಡಿ. ಮೂಲಕ ಕಳಿಸಬಹುದು

ಪ್ರಾರಂಭ : 'ಮಾನವಿ' (1985ರಲ್ಲಿ), ಅನಂತರ 'ಮಾನಸ', ಈಗ 'ನಮ್ಮ ಮಾನಸ'

ಒಳಗಿನ ಪುಟಗಳಲ್ಲಿ....

ಸಹೃದಯ ಓದುಗರಲ್ಲಿ...

ನೀವು ನಮ್ಮ ಚಿಂತನೆ–ಗುರಿಯನ್ನು ಬಲಪಡಿಸುವಿರೆಂದು ನಮಗೆ ನಂಬಿಕೆ ಇದೆ. ನೀವು ಓದುತ್ತಿರುವ 'ನಮ್ಮ ಮಾನಸ'ವನ್ನು ಹೊರತರಲು ನಿಮ್ಮ ಆರ್ಥಿಕ ನೆರವು, ಪ್ರೋತ್ಸಾಹ ಮುಖ್ಯ. 'ನಮ್ಮ ಮಾನಸ'ವನ್ನು ಮತ್ತೊಮ್ಮೆ ನಿರಂತರವಾಗಿ ಜೀವಂತವಾಗಿಡಲು ಸಹೃದಯ ಓದುಗರ ಬೆಂಬಲದ ಅಗತ್ಯವಿದೆ. ನೀವು ಯಾವುದಾದರೊಂದು ಬಗೆಯಲ್ಲಿ ನಮ್ಮೊಂದಿಗೆ ಕೈಜೋಡಿಸಬಹುದು.

- ಪ್ರತಿ ಸಂಚಿಕೆಗೆ ಲೇಖನಗಳನ್ನು ಬರೆಯಿರಿ ಇಲ್ಲವೇ ಬೇರೆಯವರಿಂದ ಬರೆಯಿಸಿ ಕಳುಹಿಸಿ.
- ವಾರ್ಷಿಕ ಚಂದಾದಾರರಾಗಿ ಮತ್ತು ಇನ್ನಷ್ಟು ಚಂದಾದಾರರನ್ನು ಪರಿಚಯಿಸಿ.
- ಮಾನಸದ ಒಂದು ಸಂಚಿಕೆಯ ಮುದ್ರಣದ ಖರ್ಚು ರೂ. 7,000/– ರಲ್ಲಿ ಪೂರ್ತಿ ಇಲ್ಲವೇ ನಿಮಗೆ ಸಾಧ್ಯವಾದಷ್ಟು ಹಣವನ್ನು ಕೊಟ್ಟು ಬೆಂಬಲಿಸಿ ಕೈ ಜೋಡಿಸುವಿರೆಂಬ ಆಶಯದೊಂದಿಗೆ,

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ

E-mail: nammamanasa@gmail.com
Contact: Disha K.R.: 9880467372, Lekha: 9686757053, Niharika : 77609 70430, Nirmala K.: 98869 18910

ಚಿತ್ರಕೃಪೆ: ಅಂತರಜಾಲ

ಸಂಪಾದಕೀಯ

ವಿವಾಹದ ಚೌಕಟ್ಟು ಮತ್ತು ನೈತಿಕತೆಗಳ ಮರುವಿಮರ್ಶೆ

ಮದ್ರಾಸ್ ಉನ್ನತ ನ್ಯಾಯಾಲಯ ಇತ್ತೀಚಿಗೆ ನೀಡಿದ ತೀರ್ಪು ಇಂದಿನವರೆಗೂ ಸಾಂಪ್ರದಾಯಿಕ ಭಾರತದ ಜಡ ವ್ಯವಸ್ಥೆಯಲ್ಲಿ ಚರ್ಚೆಗೆ ನಿಷಿದ್ಧವಾಗಿ ಹೂತು ಹೋಗಿದ್ದ ಕೆಲ ಸಮಸ್ಯೆಗಳನ್ನು ಬೆಳಕಿಗೆ ತಂದಿದೆ. ಈ ತೀರ್ಪಿನ ವಿವರಗಳು ವಿವಾದಕ್ಕೆ ಒಳಗಾಗಿ ಸಂಪ್ರದಾಯವಾದಿಗಳ ಕೆಂಗಣ್ಣಿಗೆ ಗುರಿಯಾಗಿದ್ದರೂ ಸಮಸ್ಯೆಯ ಬೇರನ್ನು ಬೇರೆ ಬೇರೆ ನೆಲೆಗಳಲ್ಲಿ ಅರ್ಥಮಾಡಿಕೊಳ್ಳಲು ಅವಶ್ಯವಾಗಿದೆ. ಈ ತೀರ್ಪು ಈಗಾಗಲೇ ಮಹಿಳಾ ಚಳುವಳಿಯಲ್ಲಿ ಅನೇಕ ಬಾರಿ ಚರ್ಚೆಗೆ ಒಡ್ಡಲ್ಪಟ್ಟಿರುವ ವಿವಾಹ, ಕೌಟುಂಬಿಕ ಸಂಬಂಧ, ವಿವಾಹ ಪೂರ್ವ, ವಿವಾಹ ರಹಿತ ಹಾಗೂ ವಿವಾಹೇತರ ಲೈಂಗಿಕ ಸಂಬಂಧಗಳನ್ನು ಮತ್ತೊಮ್ಮೆ ಪುನರ್ ಪರಿಶೀಲಿಸುವ ನಿಟ್ಟಿನಲ್ಲಿ ಹೆಜ್ಜೆ ಇಡುವ ಅಗತ್ಯವನ್ನು ಎತ್ತಿ ಹಿಡಿದಿದೆ.

ವಯಸ್ಸಿಗೆ ಬಂದ ಗಂಡು–ಹೆಣ್ಣಿನ ನಡುವಿನ ಸಮ್ಮತಿಯ ಲೈಂಗಿಕ ಸಂಬಂಧವನ್ನು ವಿವಾಹ ಎಂದು ಪರಿಗಣಿಸಬೇಕು ಎಂಬ ಈ ತೀರ್ಪು – ವಿವಾಹ ಪೂರ್ವ ಸಂಬಂಧ, ಲೀವ್–ಇನ್ ರಿಲೇಶನ್, ಒಪ್ಪಿತ ಲೈಂಗಿಕತೆಯಂತಹ ಸೂಕ್ಷ್ಮ ವಿಚಾರಗಳನ್ನು ಮತ್ತೆ ಚರ್ಚೆಗೆ ತಂದಿದೆ. ದುರಾದೃಷ್ಟವಶಾತ್ ನಮ್ಮ ಮಾಧ್ಯಮಗಳು ವಿವಾಹ ಪೂರ್ವ ಸಂಬಂಧದ ಚರ್ಚೆಯನ್ನು ವಿಜೃಂಭಿಸಿ ಸಮಸ್ಯೆಯ ಇತರ ಆಯಾಮಗಳನ್ನು ಸಂಪೂರ್ಣ ನಿರ್ಲಕ್ಷಿಸಿದಂತಿದೆ. ಲೈಂಗಿಕ ಸಂಬಂಧ ಹೊಂದಿದ ವ್ಯಕ್ತಿಗಳು ಪ್ರತ್ಯೇಕಗೊಳ್ಳಲು ಬಯಸಿದಲ್ಲಿ 'ಪತ್ನಿ'ಯಿಂದ ವಿಚ್ಛೇದನಗೊಳ್ಳದೆ 'ಪತಿ' ಬೇರೊಂದು ವಿವಾಹ ಮಾಡಿಕೊಳ್ಳಲಾಗದೆಂದು ತೀರ್ಪಿನಲ್ಲಿ ಹೇಳಿರುವುದು ಮಹಿಳೆಯರ ಕಾಳಜಿಗಳನ್ನು ರಕ್ಷಿಸುವಲ್ಲಿ ಒಂದು ಉತ್ತಮ ಯತ್ನ. ನ್ಯಾಯಮೂರ್ತಿ ಕರ್ಣನ್ ಮಹಿಳೆ ಪಡೆಯಬೇಕಾದ ಜೀವನ ನಿರ್ವಹಣೆ/ಪರಿಹಾರಕ್ಕೆ ಹೆಚ್ಚು ಒತ್ತುಕೊಟ್ಟಿರುವುದೂ ಕೂಡಾ ಮಹಿಳೆಯ ಹಿತರಕ್ಷಣೆಯ ದೃಷ್ಟಿಯಿಂದ ಅತ್ಯಂತ ಶ್ಲಾಘನೀಯವಾದುದು.

ಇಂತಹ ಬೆಳವಣಿಗೆ ನಮ್ಮ ಸಂಸ್ಕೃತಿಯನ್ನು ಹಾಳುಗೆಡುವುತ್ತದೆ ಎಂಬ ಬೊಬ್ಬೆ ಎಲ್ಲಾ ಕಡೆ ಕೇಳಿಬರುತ್ತಿದೆ. ಆದರೆ ಸರಕು ಸಂಸ್ಕೃತಿಯಲ್ಲಿ ಇವು ಕೆಲವು ಮಹಿಳೆಯರಿಗೆ ಅನಿವಾರ್ಯ ಆಯ್ಕೆಗಳೂ ಆಗುತ್ತಿವೆ. ಸ್ಪರ್ಧಾತ್ಮಕ ಜಗತ್ತಿನಲ್ಲಿ ದುಡಿಯುವ, ದುಡಿಮೆಯನ್ನು ಉಳಿಸಿಕೊಳ್ಳಲು ನೈಪುಣ್ಯತೆ ಹೆಚ್ಚಿಸಿಕೊಳ್ಳುವ, ಸಮಯ–ಸಂಚಾರಗಳನ್ನು ತಮ್ಮದಾಗಿಸಿಕೊಳ್ಳುವ ಸ್ವಾತಂತ್ರ್ಯದ ಮಹತ್ವ ಅರಿತಿರುವ ಯುವ ಮಹಿಳೆಯರು ವಿವಾಹದ, ಕುಟುಂಬದ ಚೌಕಟ್ಟಿನ ಹೊರಗೆ ಸಂಬಂಧಗಳನ್ನು ಆತ್ಮೀಯವಾಗಿಸಿಕೊಳ್ಳಲು; ಲೈಂಗಿಕ ಸಂಬಂಧಗಳನ್ನು ರೂಢಿಸುವ ಆಯ್ಕೆಯತ್ತ ಹೆಜ್ಜೆ ಹಾಕಿದ್ದು ನಾವು ಗಮನಿಸುತ್ತೇವೆ. ಆದರೆ ಪ್ರಚಲಿತದಲ್ಲಿರುವ ಪುರುಷ ಪ್ರಧಾನ ಮೌಲ್ಯಗಳನ್ನು ಬಳಸಿಕೊಂಡು ಮಹಿಳೆಯರನ್ನು ಬಳಸಿ ಬಿಸಾಕುವ, ಸಂಬಂಧಗಳಿಗೆ ಜವಾಬ್ದಾರಿಯೇ ಇಲ್ಲದಂತೆ ವರ್ತಿಸುವ ಪ್ರವೃತ್ತಿಗಳು ಹೆಚ್ಚಾಗುತ್ತಿದ್ದಂತೆ ಇಂತಹ ಪ್ರಕರಣಗಳು ನ್ಯಾಯಾಲಯದ ಬಾಗಿಲು ಬಡಿದು, ಕಾನೂನಿನ ಮಧ್ಯ ಪ್ರವೇಶಿಕೆಯನ್ನು ಒತ್ತಾಯಿಸಿದ ಹಿನ್ನಲೆಯಿಂದ, ಧೀರ್ಘ ಕಾಲ ಒಟ್ಟಿಗೆ ಬದುಕಿದ, ಲೈಂಗಿಕ ಸಂಬಂಧಗಳನ್ನು ಇರಿಸಿಕೊಂಡ ಮಹಿಳೆ ಹಾಗೂ ಪುರುಷನ ಸಂಬಂಧವನ್ನು ವೈವಾಹಿಕ ಚೌಕಟ್ಟಿನೊಳಗೆ ಇರಿಸಲು ನ್ಯಾಯಾಲಯ ಆದೇಶಿಸಿದೆ. ಆ ಬದ್ಧತೆಯ ಜೊತೆಗೆ, ಕಾನೂನಿನ ನೆರವನ್ನು ಮೋಸ ಹೋಗುವ ಮಹಿಳೆಗೆ ನೀಡುವ ಸದುದ್ದೇಶ ಈಗಿನ ತೀರ್ಪಿನದಿರಬಹುದು. ಮತ್ತು ಇದು ವಿವಾಹ ಪೂರ್ವ ಸಂಬಂಧವನ್ನು ಇನ್ನಷ್ಟು ಜವಾಬ್ದಾರಿಯುತ ವಾಗಿಸುತ್ತದೆ ಎಂಬ ವಿಚಾರವನ್ನು ನಾವು ಅರಿಯಬೇಕು. ಬೇಕು ಬೇಕಾದಾಗ ಹೊಸ ಸಂಬಂಧಗಳತ್ತ ಮುಖ ಮಾಡುವ, ಬಳಸಿ ಬಿಸಾಕುವ ಸಂಸ್ಕೃತಿಯ ಯುವಕರು ಇನ್ನು ಮುಂದೆ ಎಚ್ಚರದ ಪ್ರೌಢ ಹೆಜ್ಜೆ ಇಡುವುದು ಅನಿವಾರ್ಯವಾಗುತ್ತದೆ.

ವಿವಾಹದಲ್ಲಿಸಂಪ್ರದಾಯಕ್ಕಿಂತ ಕಾನೂನು ವ್ಯವಸ್ಥೆಗೆ ಹೆಚ್ಚು ಗೌರವ ಕೊಡುವ ಈ ತೀರ್ಪು ಹುಟ್ಟು ಹಾಕಿರುವ ಚರ್ಚೆ ಬಹುಶಃ ದೀರ್ಘಾವಧಿಯಲ್ಲಿ ಹೆಣ್ಣು–ಗಂಡಿನ ಸಂಬಂಧಗಳ ಸುತ್ತಲಿರುವ ಮೌನ ಮುರಿಯಬಹುದು. ವಿವಾಹದ ಚೌಕಟ್ಟು ಮತ್ತು ನೈತಿಕತೆಗಳ ಬಗ್ಗೆ ಕೂಡಾ ಪುನರ್ ಯೋಚನೆಗಳು, ವಿಮರ್ಶೆಗಳು ಪ್ರಾರಂಭವಾಗಬಹುದು. ವಿವಾಹದ ಚೌಕಟ್ಟಿನೊಳಗೆ

ನಡೆಯುವ ಎಲ್ಲವೂ ನೈತಿಕವೇ? ವಿವಾಹದಾಚೆಗಿನ ಸಂಬಂಧಗಳಲ್ಲಿ ಬದ್ಧತೆ ಇರುವುದೇ ಇಲ್ಲವೇ? ವಿವಾಹವನ್ನು ಪವಿತ್ರ ಬಂಧನವೆಂದು ಮಹಿಳೆಯು ವೈವಾಹಿಕ ಹಿಂಸೆಗಳ ವಿರುದ್ಧ ಧ್ವನಿ ಎತ್ತದಂತೆ ಮಾಡಲಾಗಿದೆ. ಇಲ್ಲಿ ಮಹಿಳೆಗಿರುವ ಭದ್ರತೆಯಾದರೂ ಯಾವ ರೂಪದ್ದು? ವೈವಾಹಿಕ ಸಂಬಂಧ ಗಂಡು ಹೆಣ್ಣಿನ ಬದ್ಧತೆಯನ್ನು ಗಟ್ಟಿಗೊಳಿಸುವುದೇ ಹೌದಾದರೆ ಕುಟುಂಬದ ಒಳಗಿನ ದೌರ್ಜನ್ಯಕ್ಕೆ ಉತ್ತರವೇನು? ಮದ್ರಾಸ್ ನ್ಯಾಯಾಲಯದ ಈ ತೀರ್ಪು ಭಾರತೀಯ ಸಂಪ್ರದಾಯಸ್ಥರನ್ನು ಹುಬ್ಬೇರಿಸಿದ್ದರೆ, ವೈಚಾರಿಕ ಪ್ರಜ್ಞೆಯುಳ್ಳವರಿಗೆ, ಮಹಿಳಾ ಚಿಂತಕರಿಗೆ ಚಕಿತರಾಗುವಂತೆ ಮಾಡಿದೆ. ಆಯ್ಕೆಗಳು, ಪ್ರಶ್ನೆಗಳು, ಉತ್ತರಗಳು, ವಿವಾದಗಳು, ದೌರ್ಜನ್ಯಗಳು ಹೊಸ ನೆಲೆಯಲ್ಲಿ ಮತ್ತೆ ಮತ್ತೆ ಮರು ವಿಮರ್ಶೆಗೆ ಒಳಗಾಗಬೇಕಾದ ಅಗತ್ಯ ಪ್ರತಿ ಕಾಲಘಟ್ಟದಲ್ಲೂ ಇದ್ದೇ ಇರುತ್ತವೆ. ಈ ಕಾನೂನಿನಿಂದಾಗಿ ಮಹಿಳೆ, ಲೈಂಗಿಕತೆ, ವಿವಾಹ, ಕುಟುಂಬ, ವ್ಯಕ್ತಿತ್ವದ ಮರುವಿಮರ್ಶೆಯ ಅಗತ್ಯ ನಮ್ಮ ಕಾಲಘಟ್ಟದಲ್ಲಿ ಉಂಟಾಗಿದೆ ಎಂದು ನಾವು ಭಾವಿಸುತ್ತೇವೆ. ❑

ದಾಮಿನಿ

ಯಾವ ಹೆಸರಿನಿಂದ ಕರೆಯಲೇ ನಿನಗೆ
ದಾಮಿನಿ, ನಿರ್ಭಯಾ ಏನೋ ಮತ್ತೇನನ್ನೋ।
ಇಲ್ಲಿಯವರೆಗೂ ನಿನ್ನನ್ನು ನೋಡಿಯೇ ಇಲ್ಲ
ನಿನ್ನ ಹೆಸರು ನನಗೆ ಗೊತ್ತೇ ಇಲ್ಲ
ಆದರೂ ನಮ್ಮೆಲ್ಲರ ಆತ್ಮಗಳ ಜಾಲಾಡಿದೆಯಲ್ಲ।

●

ದುಃಖ ಆವರಿಸಿದೆ ದೇಶದ ಉದ್ದಗಲಕ್ಕೂ
ಪೀಡಿತಳ ನ್ಯಾಯಕ್ಕೆ ದಿಲ್ಲಿ ಇನ್ನು ಮಲಗಿಲ್ಲ
ಜಾರಿಯಿದೆ ನ್ಯಾಯದ ಹಕ್ಕಿನ ಹೋರಾಟವಿನ್ನೂ
ಗಡಿಗಳಲ್ಲೂ ಸಲ್ಲುತ್ತಿದೆ ಮೌನ ಶ್ರದ್ಧಾಂಜಲಿ
ಉರಿವ ಕೊಳ್ಳಿ ಹಿಡಿದು ನಿರಂತರ ಪ್ರಾರ್ಥನೆ।

●

ನಿರಂತರ ಉರಿಯುತ್ತಿರುವ ಈ ಕೊಳ್ಳಿ ಮೇಲಾಣೆ
ಇಷ್ಟಿಷ್ಟೇ ನಿಂತು ಹೋದ ನಿನ್ನ ಉಸಿರಿನಾಣೆ
ಹೊತ್ತಿದ ಬತ್ತಿಗಳು ಉರಿಯಲೇಬೇಕು
ಹೋರಾಟಕೆ ಪ್ರತಿಫಲ ದೊರಕಲೇಬೇಕು
ಒಂದು ದಿನ ಕಂಡೇ ಕಾಣುವೆವು ನಿನ್ನ ಕಣ್ಣಲ್ಲಿ ನಕ್ಷತ್ರ ಬೆಳಕು।

●

ದುಃಖದ ಸುನಾಮಿ ಅಲೆಗಳು ಅಪ್ಪಳಿಸುತ್ತಿವೆ
ನೀನಿರುವಲ್ಲಿಂದಲೇ ಒಮ್ಮೆ ಇಣಕಿ ನೋಡು
ಎಲ್ಲರ ಮನದಲಿ ಜೀವಂತವಾಗಿರುವೆ
ನಿನ್ನಾಣೆ ನಿನ್ನ ನಿಲ್ಲುತ್ತಿರುವ ಉಸಿರಿನಾಣೆ
ಹುಸಿಯಾಗದು ಲಕ್ಷಾಂತರ ಜನರ ಪ್ರಾರ್ಥನೆ।

ಹೋರಾಟದ ದೈತ್ಯ ಅಲೆಗಳ ಮುಂದೆ
ಯಾವ ಶಕ್ತಿಯೂ ನಿಲ್ಲಲಾರದು ನೋಡು
ಹಕ್ಕು ಪಡೆದೇ ತೀರುವ ಛಲವಿದೆ
ಉರಿವ ಕೊಳ್ಳಿ ಹಿಡಿದ ಹೊಸ ವರ್ಷದ ಬೆಳಗು
ಪೀಡಿತ ಹೆಣ್ಣುಗಳಿಗೆ ಸಮರ್ಪಿತ ನೋಡು।

●

ಲೋಕವೇ ಏನಾಗಿದೆ ನಿನ್ನ ಕರುಳಿಗೆ
ದಾಮಿನಿಯ ಉಸಿರು ವ್ಯರ್ಥವಾಗಬೇಕೆ?
ಅವಳು ಬದುಕಿದ್ದಾಳೆ ನನ್ನಲ್ಲಿ, ನಿನ್ನಲ್ಲಿ, ಎಲ್ಲರಲ್ಲಿ
ಧೈರ್ಯ ಸಾಹಸದ ಕುರುಹಾಗಿ,
ಜೀವನೋತ್ಸಾಹದ ಚಿಲುಮೆಯಾಗಿ
ಬರುವ ನಾಳೆಯ ಭರವಸೆಯ ಬೆಳಕಾಗಿ।


●

ಹೀಗೆಯೇ ಬಿಡಲಾರೆವು ಆ ಬಲತ್ಕಾರಿಗಳನ್ನು
ಎದೆ ಮೆಟ್ಟಿ ನ್ಯಾಯ ಕೇಳುವ ಬಲವಿದೆ
ಹಕ್ಕು ಪಡೆದೇ ತೀರುವ ಛಲವಿದೆ.
ಗಲ್ಲು ಶಿಕ್ಷೆ ನೀಡಿಯೇ ತೀರುತ್ತೇವೆ
ಬಲತ್ಕರಿಸಿ, ಸಾಯಿಸಿದ ಎಲ್ಲ ಸೀತೆಯರ ಲೆಕ್ಕ
ಚುಕ್ತಾ ಮಾಡುತ್ತೇವೆ ಇಲ್ಲಿಯೇ ಈ ಭೂಮಿ ಮೇಲೆಯೆ।

■ ಡಾ. ಕೆ. ಷರೀಫಾ

*'ನಮ್ಮ ಮಾನಸ'ಕ್ಕೆ ಲೇಖನ, ವಿಮರ್ಶೆ, ಕವನಗಳನ್ನು
ಇ-ಮೇಲ್ ಮೂಲಕ ಕಳುಹಿಸುವವರು ನುಡಿ ಲಿಪಿಯಲ್ಲಿ ಮಾತ್ರ ಕಳುಹಿಸಿ.*

ನೂತನ ಮುಖ್ಯಮಂತ್ರಿಯವರಿಗೂ ಕರ್ನಾಟಕ ರಾಜ್ಯ ಮಹಿಳಾ ಒಕ್ಕೂಟದ ಪತ್ರ



ಮಾನ್ಯರೆ,

ಚುನಾವಣೆಯಲ್ಲಿ ತಮ್ಮ ಪಕ್ಷ ಬಹುಮತ ಪಡೆದು ನೀವು ಮುಖ್ಯಮಂತ್ರಿಗಳಾಗಿ ಆಯ್ಕೆಯಾಗಿದ್ದೀರಿ. ಅಭಿನಂದನೆಗಳು.

ಹಿರಿಯ ಸಾಹಿತಿಗಳನ್ನೆಲ್ಲ ಪ್ರಮಾಣ ವಚನ ಸ್ವೀಕಾರಕ್ಕೆ ಮುನ್ನ ಭೇಟಿಯಾದ ನಿಮ್ಮ ಅಪರೂಪದ ಮೇಲ್ಪಂಕ್ತಿಯಲ್ಲಿ ಒಬ್ಬ ಹಿರಿಯ ಸಾಧಕಿಯೂ ಕಾಣದೇ ಇದ್ದುದರಿಂದ ನಿಮ್ಮ ಧೋರಣೆ ಏಕಮುಖವಾಗಿದೆಯೆಂಬ ಆತಂಕ ಹುಟ್ಟಿದೆ. ನಾಡಿನ ಸಾಂಸ್ಕೃತಿಕ ಸಂಗತಿಗಳ ಕುರಿತು ಚರ್ಚಿಸಲು ನೀವು ಕರೆದ ಚಿಂತಕರ ಸಭೆಯಲ್ಲಿಯೂ ಒಬ್ಬ ಮಹಿಳೆಯೂ ಇಲ್ಲದಿರುವುದು ಹಾಗೂ ಮಂತ್ರಿಮಂಡಲದಲ್ಲಿ ಕೇವಲ ಒಬ್ಬ ಮಹಿಳೆ ಸ್ಥಾನ ಪಡೆದಿರುವುದು ಈ ಬಹಿರಂಗ ಪತ್ರ ಬರೆಯಲು ಕಾರಣವಾಗಿದೆ.

ಈ ಸಲದ ಚುನಾವಣೆಯಲ್ಲಿ ದ್ವೇಷ ರಾಜಕಾರಣದ ಕೋಮುವಾದಿ ಶಕ್ತಿಗಳನ್ನು ಹಿಮ್ಮೆಟ್ಟಿಸಲು ಈ ನಾಡಿನ ಪ್ರಗತಿಪರ, ಜಾತ್ಯತೀತ ಜನರ ಶ್ರಮ ಹಾಗೂ ಬದ್ಧತೆಯನ್ನು ನೆನಪಿಸುವುದು ಅನಿವಾರ್ಯವಾಗಿದೆ. ಕೋಮುವಾದ ಶಕ್ತಿಗಳು ಇಲ್ಲಿ ಬೇರೂರಲು ಹವಣಿಸುತ್ತಿದ್ದ ದಿನಗಳಿಂದ ಒಂದಲ್ಲ ಒಂದು ರೀತಿ ಪ್ರಬಲ ಪ್ರತಿರೋಧ ಒಡ್ಡುತ್ತಲೇ ಬಂದಿರುವ ಎಡಪಂಥೀಯ, ಮಹಿಳಾ, ದಲಿತ, ಮಾನವ ಹಕ್ಕುಗಳ ಸಂಘಟನೆಗಳ ಶ್ರಮ, ಬದ್ಧತೆಗಳ ಕುರಿತು ಸಾಮಾಜಿಕ ನ್ಯಾಯವನ್ನು ನಂಬುವ ಚಿಂತಕರೂ ಸೇರಿದಂತೆ ಯಾವ ಚುನಾವಣಾ ವಿಶ್ಲೇಷಣೆಗಳೂ ನೆನಪು ಮಾಡಿಕೊಳ್ಳದ್ದುದು ವಿಪರ್ಯಾಸವೇ ಆಗಿದೆ.

ಬೆಂಗಳೂರೊಂದರಲ್ಲೇ 2011ರಲ್ಲಿ ಮಹಿಳೆಯರ ಮೇಲೆ ಹಿಂಸಾ ಪ್ರಕರಣಗಳ ಸಂಖ್ಯೆ ಒಟ್ಟು 1890. ಮಹಿಳೆಯರ ಮೇಲೆ ನಡೆಯುವ ಹಿಂಸೆಯಲ್ಲಿ ರಾಜಧಾನಿ ದೆಹಲಿ ಒಂದನೆಯ ಸ್ಥಾನದಲ್ಲಿದ್ದರೆ, ಬೆಂಗಳೂರು ಎರಡನೆಯ ಸ್ಥಾನದಲ್ಲಿದೆ. ಸರ್ಕಾರಿ ಅಂಕಿ-ಅಂಶವೇ ಹೇಳುವಂತೆ ಶಿಕ್ಷೆ ಜಾರಿಯಾಗುವ ಪ್ರಕರಣಗಳು ಶೇ 5.1 ಮಾತ್ರ. ಅಲ್ಲದೆ ದಿನೇ ದಿನೇ ಹೆಚ್ಚುತ್ತಿರುವ ಮಹಿಳೆ/ಹಸುಳೆ/ಬಾಲಕಿಯರ ಮೇಲಿನ ಬರ್ಬರ ಅತ್ಯಾಚಾರಗಳು ಆಘಾತಕಾರಿಯಾಗಿವೆ. ತಾವು ಈ ಬಗ್ಗೆ ಸೂಕ್ತಕ್ರಮ ಕೈಗೊಂಡು ತ್ವರಿತ ನ್ಯಾಯಾಲಯಗಳನ್ನು ಸ್ಥಾಪಿಸಿ, ಶೀಘ್ರ ತನಿಖೆ ನಡೆಸಿ, ತಕ್ಕ ಶಿಕ್ಷೆ ಜಾರಿಯಾಗುವಂತಹ ವ್ಯವಸ್ಥೆ ಮಾಡಬೇಕು. ಸಾರ್ವಜನಿಕ ಸ್ಥಳಗಳಲ್ಲಿ ಸೂಕ್ತ ಸುರಕ್ಷಾ ಕ್ರಮಗಳನ್ನು ಕಲ್ಪಿಸಬೇಕು. ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಿ, ಅದರಲ್ಲಿ ಮಹಿಳಾ ನ್ಯಾಯಾಧೀಶರನ್ನೇ ನೇಮಿಸಿ, ತ್ವರಿತ ನ್ಯಾಯದಾನ ವ್ಯವಸ್ಥೆ ಮಾಡಬೇಕು. ಕೌಟುಂಬಿಕ ನ್ಯಾಯಾಲಯದ ಕಾರ್ಯವೈಖರಿಯನ್ನು ಪುನರಾವಲೋಕಿಸಿ ಕಾನೂನು ಪರಿವೀಕ್ಷಣೆ ನಡೆಯಬೇಕು. ಮಹಿಳಾ ದೌರ್ಜನ್ಯ ಎಸಗಿದವರು ಚುನಾವಣೆಯಲ್ಲಿ ನಿಲ್ಲದಂತೆ, ಅಧಿಕಾರದಲ್ಲಿದ್ದರೂ ಕೆಳಗಿಳಿಯುವಂತೆ ಕಾನೂನು ತರಬೇಕು. ಸರ್ಕಾರಿ ಇಲಾಖೆಗಳಲ್ಲಿ ಲಿಂಗ ಸಂವೇದನೆ ಮತ್ತು ಸೂಕ್ಷ್ಮತೆ ಬೆಳೆಸುವ ಕಾರ್ಯಾಗಾರ ಹಮ್ಮಿಕೊಳ್ಳಬೇಕು. ಮಹಿಳೆಯರ ಕುರಿತಂತೆ ಒಟ್ಟಾರೆ ಸಮಾಜದ ರೋಗಿಷ್ಠ ಮನಃಸ್ಥಿತಿಯನ್ನು ಸರಿಪಡಿಸುವ ನಿಟ್ಟಿನಲ್ಲಿ ಮಹಿಳಾ ಸಂಘಟನೆಗಳು, ಮಾನವ ಹಕ್ಕು ಸಂಘಟನೆಗಳು ಹಾಗೂ ಸಂಬಂಧಪಟ್ಟ ತಜ್ಞರೊಂದಿಗೆ ಸಮಾಲೋಚಿಸಬೇಕು. ಜಾತ್ಯತೀತ, ಪ್ರಗತಿಪರ, ಮಹಿಳಾ ಪರ ಹಾಗೂ ಮಹಿಳಾ ಚಳವಳಿಯ ಅನುಭವವಿರುವ ಕ್ರಿಯಾಶೀಲ ಮಹಿಳೆಯರನ್ನು ಮಹಿಳಾ ಆಯೋಗಕ್ಕೆ ನೇಮಿಸಿ, ನೊಂದ ಮಹಿಳೆಯರಿಗೆ ಸೂಕ್ತ ನ್ಯಾಯ ಒದಗಿಸುವ ವಾತಾವರಣ ನಿರ್ಮಾಣ ಮಾಡಬೇಕು.

ಜೊತೆಗೆ:

- ಆರೋಗ್ಯಕರ ಕೆಲಸದ ವಾತಾವರಣ, ಸುರಕ್ಷತೆ, ಸೂಕ್ತ ವೇತನವಿಲ್ಲದೆ ಬಿಡಿಗಾಸಿಗೆ ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವ ಗುತ್ತಿಗೆ ಪೌರಕಾರ್ಮಿಕ ಮಹಿಳೆಯರು; ಅಂಗನವಾಡಿ, ಆಶಾ, ಬಿಸಿಯೂಟ ಕಾರ್ಯಕರ್ತೆಯರು; ಗಾರ್ಮೆಂಟ್ಸ್, ಮನೆಗೆಲಸ, ಬೀಡಿ ಕಟ್ಟುವ ಮಹಿಳೆಯರು ಮತ್ತು ಕಟ್ಟಡ ಕಾರ್ಮಿಕರಿಗೆ ಉದ್ಯೋಗ ಖಾತ್ರಿ, ಸಮಾನವೇತನ, ಉತ್ತಮ ಕೆಲಸದ ವಾತಾವರಣ, ಸುರಕ್ಷೆ, ಮೂಲಭೂತ ಸೌಕರ್ಯಗಳನ್ನು ಶೀಘ್ರವೇ ಜಾರಿಗೊಳಿಸುವ ವ್ಯವಸ್ಥೆ ಮಾಡಿ ಅದಕ್ಕಾಗಿ ಆಡಳಿತಾತ್ಮಕ ಕ್ರಮಗಳನ್ನು ಕೈಗೊಳ್ಳಬೇಕು.

- ಬಡವರ ಮನೆ ನೆಲೆಗಳನ್ನು ನಿರ್ನಾಮ ಮಾಡುವ ಲಾಭಕೋರ ಮಾಲುಗಳು, ದಂಧೆಗಳನ್ನು ತಡೆದು, ಮಕ್ಕಳು-ಮಹಿಳೆಯರ ಬದುಕು ಬೀದಿ ಪಾಲಾಗುವುದನ್ನು ನಿಲ್ಲಿಸಬೇಕು. ಕಡಿಮೆ ಬೆಲೆಯ ಸಾರಾಯಿ ಕುಟುಂಬ ಆರೋಗ್ಯ ನಾಶಮಾಡದಂತೆ ನೋಡಿಕೊಳ್ಳಬೇಕು. ಸರ್ಕಾರಿ ಶಾಲೆ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಯಾವುದೇ ಕಾರಣಕ್ಕೂ ಮುಚ್ಚದೆ ಉತ್ತಮ ಸೇವೆ ಲಭ್ಯವಾಗುವಂತೆ ಮಾಡಬೇಕು.
- ಸಮಾಜ/ಆಡಳಿತದ ಎಲ್ಲ ಸ್ತರಗಳಲ್ಲೂ ಮಹಿಳಾ ಪ್ರಾತಿನಿಧ್ಯ ಕನಿಷ್ಠ ಮೂರನೇ ಒಂದು ಭಾಗ ಇರುವಂತೆ ನೋಡಿಕೊಳ್ಳಬೇಕು. ವಿಧಾನಸಭಾ/ಪರಿಷತ್ತಿನಲ್ಲಿರುವ ಮಹಿಳೆಯರನ್ನು ಪರಿಗಣಿಸಿ ಮಂತ್ರಿ ಮಂಡಲದಲ್ಲಿ ಹಾಗೂ ನಿಗಮ ಮಂಡಳಿಗಳಲ್ಲಿ ಸಮಾನ ಪ್ರಾತಿನಿಧ್ಯ ನೀಡಬೇಕು. ಮುಂಬರುವ ಚುನಾವಣೆಗಳಲ್ಲಿ ಮಹಿಳಾ ಮೀಸಲಾತಿಯನ್ನು ಕರಾರುವಾಕ್ಕಾಗಿ ಜಾರಿಗೊಳಿಸುವ ಮೂಲಕ ಸಂವಿಧಾನದ ಲಿಂಗ ಸಮಾನತೆಯ ಆಶಯವನ್ನು ಜಾರಿಗೊಳಿಸಬೇಕು.
- ದೇವದಾಸಿಯರ/ವಲಸಿಗರ ಮಕ್ಕಳಿಗೆ ವಸತಿಶಾಲೆ ಮಾಡಬೇಕು. ಎಸ್‌ಸಿ-ಎಸ್‌ಟಿ/ಒಬಿಸಿ/ಮೈನಾರಿಟಿ ವಿದ್ಯಾರ್ಥಿನಿಯರ ಹಾಸ್ಟೆಲುಗಳನ್ನು ಉತ್ತಮ ಪಡಿಸಿ ಹೊಸ ನಿಲಯಗಳನ್ನು ತೆರೆಯಬೇಕು. ಎಲ್ಲ ಹೆಣ್ಣುಮಕ್ಕಳ ವಸತಿ ನಿಲಯಗಳಿಗೆ ಮಹಿಳಾ ವಾರ್ಡನ್/ ಕೆಲಸಗಾರರನ್ನೇ ನೇಮಿಸಬೇಕು.
- ಮಹಿಳಾ ವಿಶ್ವವಿದ್ಯಾಲಯವಷ್ಟೆ ಮಹಿಳೆಯರಿಗಲ್ಲ. ರಾಜ್ಯದ ಇನ್ನಿತರ ವಿಶ್ವವಿದ್ಯಾಲಯಗಳ ವಿಸಿ ಆಯ್ಕೆ ಹಾಗೂ ಸಿಂಡಿಕೇಟ್ ಸದಸ್ಯರ ಆಯ್ಕೆ ಸಮಯದಲ್ಲಿ ಮಹಿಳೆಯರ ಸೂಕ್ತ ಪ್ರಾತಿನಿಧ್ಯ ಇರುವಂತೆ ನೋಡಿಕೊಳ್ಳಬೇಕು.
- ಮಹಿಳೆ ಎಂಬ ಕಾರಣಕ್ಕೆ ಯಾವುದೇ ಅಪ್ರಾಮಾಣಿಕ/ಭ್ರಷ್ಟ/ಸ್ವಾರ್ಥಿ ಮಹಿಳೆಗೆ ಅವಕಾಶ ಕಲ್ಪಿಸಬೇಡಿ. ಸೂಕ್ತ ಮಹಿಳೆಯರನ್ನು ಎಲ್ಲ ಜಾತಿ, ಧರ್ಮ, ಜನವರ್ಗಗಳನ್ನು ಪ್ರತಿನಿಧಿಸುವಂತೆ ಆಯ್ದುಕೊಳ್ಳುವ ಎಚ್ಚರಿಕೆ ವಹಿಸಿ.

ಪ್ರಜಾತಂತ್ರದ ಉಸಿರನ್ನೆ ಹತ್ತಿಕ್ಕಲು ಪ್ರಯತ್ನಿಸಿದ್ದ ತುರ್ತು ಪರಿಸ್ಥಿತಿ, ಸಿಖ್ ನರಮೇಧದ ಕೋಮು ದಳ್ಳುರಿ, ಭ್ರಷ್ಟತೆ ಇತ್ಯಾದಿಗಳು ನಮ್ಮ ನೆನಪೆಂಬ ಹಗೇವಿನಲ್ಲಿನ್ನು ಜೀವಂತವಾಗಿವೆ. ಜನಪರ ಆಡಳಿತದ ಮೂಲಕ ದುಡಿದುಣ್ಣುವ ಜನರ ಬದುಕನ್ನು ಹಸನಾಗಿಸುವ, ಜಾತಿ-ಲಿಂಗ-ವರ್ಗ ಇತ್ಯಾದಿ ಯಾವುದೇ ರೀತಿಯ ಅಮಾನವೀಯ ತಾರತಮ್ಯವನ್ನು ತೊಡೆದು ಹಾಕಿ ಸಮಾನತೆಯ, ಸಹಬಾಳ್ವೆಯ ಸಮಾಜ ರಚನೆಗಾಗಿ ಮಾಡುವ ಪ್ರಾಮಾಣಿಕ ಪ್ರಯತ್ನದ ಮೂಲಕವಷ್ಟೇ ಹಳೆಯ ಕಳಂಕಗಳನ್ನು ತೊಡೆದು ಹಾಕಲು ಸಾಧ್ಯ. ಸಮಾಜವಾದಿ ಹಿನ್ನೆಲೆಯಿಂದ ಬಂದ ನೀವು ಮಹಿಳೆಗೆ ಸುರಕ್ಷೆಯ ಜೊತೆಗೆ ಸಮಾಜದ ಎಲ್ಲಾ ಕ್ಷೇತ್ರಗಳಲ್ಲೂ ಗೌರವ, ಸಮಾನತೆ ಲಭಿಸುವಂತೆ ಮಾಡುವಿರಿ ಎಂಬ ವಿಶ್ವಾಸ ಇಟ್ಟಿದ್ದೇವೆ.

ಜಾತಿ, ವರ್ಗ, ಧರ್ಮ, ಕುಟುಂಬ, ವಿವಾಹ, ದೇಶ, ಗಡಿ, ಪ್ರಭುತ್ವ-ಹೀಗೆ ಯಾವುದೇ ಹೆಸರಿನಲ್ಲಿ ಮಹಿಳೆಯರ ಮೇಲೆ ನಡೆಸುವ ದೌರ್ಜನ್ಯ/ಹಿಂಸೆಯನ್ನು ತಡೆದು, ಕೊನೆಗಾಣಿಸುವ ಆತ್ಮಬಲವನ್ನು ಪಡೆದುಕೊಳ್ಳಲು ನಾವೇ ಸಜ್ಜಾಗಬೇಕಾದ ಕಾಲ ಇದು.ಎಂದೇ 'ಮಹಿಳಾ ದೌರ್ಜನ್ಯ ವಿರೋಧಿ ವೇದಿಕೆ' ಹಾಗೂ 'ಮಹಿಳಾ ಸಂಘಗಳ ಜಾಲ'ದ ಅಡಿಯಲ್ಲಿ ಸಮಾನತೆ, ಸಹಬಾಳ್ವೆ ಹಾಗೂ ಪ್ರಜಾತಂತ್ರದಲ್ಲಿ ನಂಬಿಕೆ ಇರುವ 126 ಮಹಿಳಾ ಸಂಘಟನೆಗಳು ಮಂಗಳೂರಿನಲ್ಲಿ ಮಹಿಳಾ ದಿನಾಚರಣೆ ಆಚರಿಸಿ 'ಕರ್ನಾಟಕ ರಾಜ್ಯ ಮಹಿಳಾ ಒಕ್ಕೂಟ'ವು ರೂಪುಗೊಂಡಿದೆ. ಮಹಿಳಾಪರ ಕ್ರಮಗಳನ್ನು ಕೈಗೊಳ್ಳದೇ ಹೋದಲ್ಲಿ ಮಹಿಳಾ ಒಕ್ಕೂಟವು ಸಮಾನ ಹಕ್ಕುಗಳಿಗಾಗಿ ಮುಂಬರುವ ದಿನಗಳಲ್ಲಿ ವಿಶಾಲ ಆಂದೋಲನವನ್ನು ಹಮ್ಮಿಕೊಳ್ಳಬಯಸುತ್ತದೆ.

– ಕರ್ನಾಟಕ ರಾಜ್ಯ ಮಹಿಳಾ ಒಕ್ಕೂಟದ ಪರವಾಗಿ,

–ದು.ಸರಸ್ವತಿ, ಎಚ್.ಎಸ್ ಅನುಪಮಾ, ಗುಲಾಬಿ ಬಿಳಿಮಲೆ, ಮರ್ಲಿನ್ ಮಾರ್ಟಿಸ್, ಮಲ್ಲಿಗೆ, ಸಾರಾ ಅಬೂಬಕರ್, ಚಂದ್ರಕಲಾ ನಂದಾವರ, ಗೌರಿ, ವೈದೇಹಿ, ರೀಟಾ ನೊರೊನ್ಹಾ, ಮಧು ಭೂಷಣ್, ಕೆ.ನೀಲಾ, ಶಕುನ್, ಜ್ಯೋತಿ .ಎ, ರತಿ ರಾವ್, ಪ್ರಭಾ ಮತ್ತು ಇತರರು.


ದಯವಿಟ್ಟು ಗಮನಿಸಿ

ಕಳೆದ ಸಂಚಿಕೆಯಲ್ಲಿ ನಮ್ಮ ಪ್ರಿಯ ಓದುಗರೆಲ್ಲರಿಗೂ ಪತ್ರಿಕೆ ಬೇಕಾದಲ್ಲಿ ಚಂದಾ ನವೀಕರಿಸಲು ಹಾಗೂ ತಮ್ಮ ವಿಳಾಸ ಮತ್ತು ದೂರವಾಣಿ ಸಂಖ್ಯೆಯನ್ನು ನಮಗೆ ಮೆಸೇಜ್, ಇ-ಮೇಲ್ ಅಥವಾ ಅಂಚೆ ಮಾಲಕ ದೃಢಪಡಿಸಬೇಕೆಂದು ಮನವಿ ಮಾಡಿಕೊಳ್ಳಲಾಗಿತ್ತು. ಆದರೆ ಇದುವರೆಗೂ ಕೆಲವೇ ಕೆಲವರು ಚಂದಾ ನವೀಕರಿಸಿರುತ್ತಾರೆ. ಹಾಗಾಗಿ ಮುಂದಿನ ಸಂಚಿಕೆಯನ್ನು ಈಗಾಗಲೇ ಚಂದಾ ನವೀಕರಿಸುವವರಿಗೆ ಮಾತ್ರ ಪತ್ರಿಕೆ ಕಳುಹಿಸಲಾಗುವುದು.

–ಸಂಪಾದಕ ಮಂಡಳಿ

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:

ಶೀತಲ ಭಟ್ 7411529355 E-mail: nammamanasa@gmail.com



ಅಂತೂ-ಇಂತೂ ಬಂತು-

ಮಕ್ಕಳನ್ನು ಲೈಂಗಿಕ ದೆಸೆಯಿಂದ ರಕ್ಷಿಸುವ ಕಾನೂನು


■ ಪ್ರೀತಿ

ದೆಹಲಿಯ ಸಾಮೂಹಿಕ ಅತ್ಯಾಚಾರ ಪ್ರಕರಣದ ನಂತರ ಪತ್ರಿಕೆಗಳಲ್ಲಿ ಹೆಚ್ಚು ಕಡಿಮೆ ಪ್ರತಿ ದಿನವು ಒಂದಿಲ್ಲೊಂದು ಪ್ರಕರಣಗಳು ವರದಿಯಾಗಿರುತ್ತಿರುವುದನ್ನು ಎಲ್ಲರೂ ಗಮನಿಸಿರಬಹುದು. ಇದೇನಿದು ಸಾಮೂಹಿಕ ಸನ್ನಿಯಂತೆ ಅತ್ಯಾಚಾರ ಪ್ರಕರಣಗಳು ನಡೆಯುತ್ತಿವೆ ಎನ್ನುವ ಮಾತುಗಳು ಕೇಳಿಬಂದವು ಮತ್ತು ಬರುತ್ತಲೇ ಇವೆ. ಮಕ್ಕಳ ಮೇಲಿನ ಲೈಂಗಿಕ ಹಲ್ಲೆ/ಅತ್ಯಾಚಾರ ಪ್ರಕರಣಗಳಂತೂ ಹೇಸಿಗೆ ಹುಟ್ಟಿಸುವ ಮತ್ತು ಮನುಷ್ಯತ್ವ ನಶಿಸಿ ಹೋಗಿತ್ತಿದೆಯೇ ಎನ್ನುವ ಪ್ರಶ್ನೆಯೂ ಮೂಡುವಂತಾಗಿದೆ. ಮೂರು ವರುಷದ ಹೆಣ್ಣು ಮಗು, ಐದು ವರುಷದ ಮಗು, ಎಂಟು ವರುಷದ ಹೆಣ್ಣು ಮಗುವಿನ ಮೇಲೆ ಅರುವತ್ತು ವರ್ಷದ ಮುದುಕನಿಂದ, ತಂದೆಯಿಂದಲೇ ಮಗಳ ಮೇಲೆ ಸತತ ಲೈಂಗಿಕ ಹಲ್ಲೆ ಹೀಗೆ ವಯಸ್ಸಿನ, ಸಂಬಂಧಗಳ ಯಾವುದೇ ಪರಿಮಿತಿ ಇಲ್ಲದೆ ನಡೆದ ಮತ್ತು ನಡೆಯುತ್ತಿರುವ ಅತ್ಯಾಚಾರ ಪ್ರಕರಣಗಳು ಹೆಣ್ಣುಮಕ್ಕಳ ಮತ್ತು ಹೆಣ್ಣು ಹೆತ್ತವರ ಆತ್ಮಸ್ಥೈರ್ಯವನ್ನೇ ಕುಗ್ಗಿಸುವಂತಾಗಿದೆ.



ಮಕ್ಕಳ ಮೇಲೆ ನಡೆಯುವ ಅತ್ಯಾಚಾರ ಪ್ರಕರಣಗಳೂ ಈಗ ಹೊಸದಾಗಿ ನಡೆಯುತ್ತಿರುವುದಲ್ಲ. ಬಹಳ ಹಿಂದಿನಿಂದಲೂ ಇದನ್ನು ಕೇಳುತ್ತಿದ್ದೇವೆ. ಒಂದು ವರುಷದ ಆರು ತಿಂಗಳ ಮಕ್ಕಳ ಮೇಲೂ ಅತ್ಯಾಚಾರ ನಡೆಸುವ ಯತ್ನ ಮಾಡಿರುವುದು ಕೂಡ ವರದಿಯಾಗಿದೆ! ಆದರೆ ಈ ಸಂದರ್ಭದಲ್ಲಿ ಈ ಪ್ರಕರಣಗಳಿಗೆ ಹೆಚ್ಚಿನ ಒತ್ತನ್ನು ನೀಡಿ ಮಾಧ್ಯಮಗಳಲ್ಲಿ ಪ್ರಚಾರಗೊಳ್ಳುತ್ತಿವೆ. ನಮ್ಮ ಮುಂದೆ ಕಾಣಸಿಗುವ ಪ್ರಕರಣಗಳಿಗೆ ಸಮಾಜ ಬೆಸ್ತು ಬಿದ್ದಿದೆ. ಇನ್ನು ಬಹಿರಂಗಗೊಳ್ಳದ ಪ್ರಕರಣಗಳು ಎಷ್ಟೆಂಬುದು ಊಹಿಸಲು ಅಸಾಧ್ಯ. ಸಾಮಾನ್ಯವಾಗಿ ಇಂಥ ವಿಚಾರಗಳು ಬಹಿರಂಗಗೊಳ್ಳದೆ ಇರಲು ಕಾರಣ ಹೆಚ್ಚಿನ ಸಂದರ್ಭಗಳಲ್ಲಿ ಮಕ್ಕಳು ಲೈಂಗಿಕ ದೌರ್ಜನ್ಯಗಳಿಗೆ ಒಳಗಾಗುವುದು ಬಹಳ ಹತ್ತಿರದ ಪರಿಚಿತರಿಂದ, ತಮ್ಮ ಕುಟುಂಬದವರಿಂದಲೇ ಆಗಿರುತ್ತದೆ. ಇದನ್ನು ವಿರೋಧಿಸುವುದು ಹೇಗೆಂಬುದೇ ಮಕ್ಕಳಿಗೆ ತಿಳಿದಿರುವುದಿಲ್ಲ. ಹೊರಗೆ ಹೇಳಲು ಹೆದರಿಕೆ ಆದರೆ ಸಹಿಸಲು ಕಷ್ಟ ಎನ್ನುವಂತಹ ಸಂದರ್ಭವನ್ನು ಸಾಕಷ್ಟು ಮಕ್ಕಳು ಅನುಭವಿಸಿಕೊಂಡು ಬಂದಿರುತ್ತಾರೆ. ಇನ್ನು ಕೆಲ ಸಂದರ್ಭಗಳಲ್ಲಿ ತಮ್ಮ ಮೇಲೆ ನಡೆಯುತ್ತಿರುವುದು ದೌರ್ಜನ್ಯ ಎಂಬ ಅರಿವು ಬಾರದಿರುವಷ್ಟು ಮುಗ್ಧ ಮನಸ್ಸಾಗಿರುತ್ತದೆ. 2007ರಲ್ಲಿ ಭಾರತ ಸರಕಾರವು ಮಹಿಳೆ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮೂಲಕ ಮಕ್ಕಳ ಮೇಲಿನ ದೌರ್ಜನ್ಯದ ವಿಚಾರದ ಬಗ್ಗೆ ಒಂದು ಸಮೀಕ್ಷೆಯನ್ನು ನಡೆಸಿತ್ತು. ಆ ಸಮೀಕ್ಷೆಯ ಶೇಖಡಾ 72ರಷ್ಟು ಮಕ್ಕಳು ದೌರ್ಜನ್ಯಕ್ಕೆ ಒಳಗಾದವರು ಮತ್ತು ಅದನ್ನು ಯಾರಿಗೂ ತಿಳಿಸಿರುವುದಿಲ್ಲ ಎಂಬ ಆಘಾತಕಾರಿ ವಿಚಾರವನ್ನು ಹೊರಹಾಕಿತು.

ಮಕ್ಕಳು ತಮ್ಮ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯವನ್ನು ಯಾರಿಗೂ ತಿಳಿಸುವುದಿಲ್ಲ. ಒಂದೊಮ್ಮೆ ತಿಳಿಸಿದರೆ ಮನೆಯವರೇ ಈ ವಿಚಾರ ಬಹಿರಂಗಗೊಳಿಸುವುದನ್ನು ತಡೆಯುತ್ತಾರೆ ಏಕೆಂದರೆ ವಿಚಾರ ಬಹಿರಂಗಗೊಂಡ ನಂತರ ಅನುಭವಿಸಬೇಕಾದ ಯಾತನೆ ಮತ್ತೊಮ್ಮೆ ಅದೇ ಮಗು ಮತ್ತು ಕುಟುಂಬ, ಕಾರಣ ನಮ್ಮ ಕಾನೂನು ವ್ಯವಸ್ಥೆ ಇರುವ ಶೋಚನೀಯ ಸ್ಥಿತಿ. ಹೆಚ್ಚಿನ ಸಂದರ್ಭಗಳಲ್ಲಿ ಪೊಲೀಸಿನವರು ದೂರನ್ನು ದಾಖಲಿಸಿಕೊಳ್ಳುವುದಿಲ್ಲ ಇನ್ನು ದಾಖಲಿಸಿಕೊಂಡರೆ ಅದರ ಸುತ್ತ ನಡೆಯುವ ತನಿಖೆ ಮಗುವಿನ ಮನೋಬಲವನ್ನೇ ಕುಗ್ಗಿಸುವಂಥದ್ದಾಗಿರುತ್ತದೆ. 2012ರ ವರೆಗೆ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರತ್ಯೇಕ ಕಾನೂನು ಇರಲಿಲ್ಲ. ಇದೊಂದು ಆಘಾತಕಾರಿ ವಿಚಾರವೇ ಸರಿ. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯವನ್ನು ಭಾರತೀಯ ದಂಡ ಸಂಹಿತೆ ಕಲಂ 375, 354 ಮತ್ತು 377ರಡಿ ಕಾನೂನು ಕ್ರಮ ಕೈಗೊಳ್ಳಲಾಗುತ್ತಿತ್ತು. ಇದು ಅತ್ಯಾಚಾರ, ಒಬ್ಬ ಮಹಿಳೆಯ ಗೌರವಕ್ಕೆ ಧಕ್ಕೆ ತರುವಂತಹ ಹಲ್ಲೆ ಮತ್ತು ಅಸ್ವಾಭಾವಿಕ ಲೈಂಗಿಕ ಸಂಪರ್ಕವನ್ನು ವ್ಯಾಖ್ಯಾನಿಸುತ್ತದೆ. ಈ ಕಲಂಗಳು ದೌರ್ಜನ್ಯಕ್ಕೊಳಗಾದ ಮಕ್ಕಳಿಗೆ ನ್ಯಾಯ ಒದಗಿಸುವಲ್ಲಿ ಅಸಮರ್ಪಕವಾಗಿರುವಂಥವು. ಇವು ಕೇವಲ ಕೆಲ ನಿರ್ದಿಷ್ಟ ರೀತಿಯಲ್ಲಿ ದೌರ್ಜನ್ಯ ನಡೆದಿದ್ದರೆ ಮಾತ್ರ ಅಪರಾಧವೆಂದು ಪರಿಗಣಿಸುವಲ್ಲಿ. ಉದಾಹರಣೆ: ಕಲಂ 375ರಲ್ಲಿ ಅತ್ಯಾಚಾರವನ್ನು 'ಲೈಂಗಿಕ ಸಂಭೋಗ'ವಾಗಿದ್ದರೆ (Penetration) ಮಾತ್ರ ಅಪರಾಧವೆಂದು ಪರಿಗಣಿಸಲಾಗುತ್ತಿದೆ. ಹಾಗಾಗಿ ಇವು ಮಕ್ಕಳ ಮೇಲೆ ನಡೆಯುವ ಹಲವು ಬಗೆಯ ಲೈಂಗಿಕ ಹಿಂಸೆಯನ್ನು ವಿಶ್ಲೇಷಿಸುವಲ್ಲಿ ವಿಫಲವಾಗಿದೆ. ಹಲವಾರು ಸಂದರ್ಭಗಳಲ್ಲಿ ಮಕ್ಕಳ ಮೇಲೆ ಲೈಂಗಿಕ ಸಂಭೋಗ ಆಗದೆಯೇ ಇರಬಹುದು. ಹಾಗಾಗಿ ಲೈಂಗಿಕ ದೌರ್ಜನ್ಯವನ್ನು ಕೇವಲ ಸಂಭೋಗಕ್ಕೆ ಸೀಮಿತಗೊಳಿಸುವುದು ಅಪರಾಧವನ್ನು ಮತ್ತು ಅಪರಾಧಿಯನ್ನು ಸುಲಭವಾಗಿ ರಕ್ಷಿಸ ಬಹುದು ಮತ್ತು ಅಂತಿಮವಾಗಿ ದೌರ್ಜನ್ಯಕ್ಕೊಳಗಾದ ಮಗು ಈ ಎಲ್ಲಾ ಬೆಳವಣಿಗೆಯಿಂದ ಇನ್ನಷ್ಟು ಆಘಾತಕ್ಕೆ ಒಳಗಾಗುತ್ತದೆ. ಇನ್ನು ಗಂಡುಮಕ್ಕಳ ಮೇಲೆ ದೌರ್ಜನ್ಯ ನಡೆದಿದ್ದೆ ಆದರೆ ಅದನ್ನು ಭಾರತೀಯ ದಂಡ ಸಂಹಿತೆ 377ರಡಿ ಬರುವ ಅಸ್ವಾಭಾವಿಕ ಲೈಂಗಿಕ ಸಂಪರ್ಕದಡಿ ಪ್ರಕರಣ ದಾಖಲಿಸಿಕೊಳ್ಳಲಾಗುತಿತ್ತು. ಇದು ಕೂಡ ಬಹಳ ಸೀಮಿತ ವಾದುದೆ.



ಈ ಎಲ್ಲ ಕಾರಣಗಳಿಗಾಗಿ ಮತ್ತು ಗಣನೀಯವಾಗಿ ಏರುತ್ತಲೇ ಇರುವ ಮಕ್ಕಳ ಮೇಲಿನ ಲೈಂಗಿಕ ಹಿಂಸೆಯ ಪರಿಣಾಮವಾಗಿ ಮತ್ತು ಈ ವಿಚಾರಕ್ಕಾಗಿಯೇ ಪ್ರತ್ಯೇಕ ಕಾನೂನಿನ ಅವಶ್ಯಕತೆ ಇದೆ ಎಂಬ ಒತ್ತಡದಿಂದಲೂ 'ಲೈಂಗಿಕ ದೌರ್ಜನ್ಯಕ್ಕೊಳಗಾದ ಮಕ್ಕಳ ರಕ್ಷಣಾ ಕಾಯಿದೆ, 2012 (Protection of children from Sexual Abuse Act) ತರಲಾಗಿದೆ. ಈ ಕಾಯಿದೆಯ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಮತ್ತು ಅದನ್ನು ಹತ್ತಿಕ್ಕುವ ಸಲುವಾಗಿ ಬಂದಿರುವ ದೇಶದ ಮೊದಲ ಕಾನೂನಾಗಿರುತ್ತದೆ. ಈ ಕಾಯಿದೆಯಡಿ 18 ವರುಷಕ್ಕಿಂತ ಕೆಳಗಿನವರನ್ನು ಮಕ್ಕಳೆಂದು ಪರಿಗಣಿಸಲಾಗಿದೆ ಮತ್ತು ಈ ಕಾಯಿದೆಯು ಲಿಂಗಭೇದವಿಲ್ಲದೆ ರೂಪುಗೊಂಡಿದೆ. ಕಾಯಿದೆ ಗಂಡು ಮತ್ತು ಹೆಣ್ಣುಮಕ್ಕಳು ಇಬ್ಬರಿಗೂ ಅನ್ವಯಿಸುತ್ತದೆ. ಕಾಯಿದೆಯಡಿ ಮಕ್ಕಳ ಮೇಲೆ ನಡೆಯುವ ಲೈಂಗಿಕ ಹಿಂಸೆಗಳನ್ನು ಲೈಂಗಿಕ ಸಂಭೋಗದ ಹಲ್ಲೆ (Penetrative Sexual Assault), ಲೈಂಗಿಕ ಹಲ್ಲೆ (Sexual Assault) ಮತ್ತು ಲೈಂಗಿಕ ಹಿಂಸೆ (Sexual Harassment) ಎಂದು ಮೊದಲ ಬಾರಿಗೆ ವಿಂಗಡಿಸಿ, ವಿವರವಾಗಿ ವ್ಯಾಖ್ಯಾನಿಸಲಾಗಿದೆ ಮತ್ತು ಈ ಎಲ್ಲ ಅಪರಾಧಗಳಿಗೂ ಆ ಅಪರಾಧಕ್ಕೆ ತಕ್ಕಂತೆ ಶಿಕ್ಷೆಯನ್ನು ನೀಡಲಾಗಿದೆ. ಇದರ ಜೊತೆಗೆ ಬಹಳ ಮುಖ್ಯವಾಗಿ ಕಾಯಿದೆಯು ಮಕ್ಕಳನ್ನು ಕಾಮಪ್ರಚೋದನೆಯ ಉದ್ದೇಶಕ್ಕಾಗಿ ಬಳಸುವುದನ್ನು ಶಿಕ್ಷಾರ್ಹ ಅಪರಾಧವೆಂದು ಪರಿಗಣಿಸಿದೆ. ಈ ಕಾಯಿದೆಯ ಬಹಳ ಪ್ರಮುಖ ಅಂಶ ಮಕ್ಕಳ ಮೇಲೆ ನಡೆಯುವ ವಿವಿಧ ಬಗೆಯ ಲೈಂಗಿಕ ಹಿಂಸೆಯನ್ನು ವಿವರವಾಗಿ ವಿಶ್ಲೇಷಿಸಿರುವುದು. ಕಲಂ 3ರಡಿ ಲೈಂಗಿಕ ಸಂಭೋಗದ ಹಲ್ಲೆಯನ್ನು ಕೇವಲ ಶಿಶ್ನ ಮತ್ತು ಯೋನಿಯ ಸಂಭೋಗಕ್ಕೆ ಸೀಮಿತಗೊಳಿಸಿದೆ. ಅಪರಾಧಿಯು ಯಾವುದೇ ವಸ್ತು ಅಥವಾ ತನ್ನ ದೇಹದ ಯಾವುದೇ ಭಾಗದಿಂದ ಮಗುವಿನ ದೇಹದ ಯಾವುದೇ ಭಾಗದ ಮೇಲೆ ನಡೆಸುವ ಲೈಂಗಿಕ ಹಲ್ಲೆಯನ್ನು ಅಪರಾಧವೆಂದು ಪರಿಗಣಿಸಿದೆ ಮತ್ತು ಈ ಅಪರಾಧಕ್ಕೆ ಏಳು ವರುಷಗಳಿಗೂ ಕಡಿಮೆಯಲ್ಲದ ಮತ್ತು ಜೀವಿತಾವಧಿವರೆಗೂ ವಿಸ್ತರಿಸಬಹುದಾದ ಜೈಲು ಶಿಕ್ಷೆ ಮತ್ತು ದಂಡವನ್ನು ವಿಧಿಸಲಾಗಿದೆ. ಇನ್ನು ಕಲಂ 7ರಡಿ 'ಲೈಂಗಕ ಹಲ್ಲೆ'ಯನ್ನು ವಿವರಿಸುವಾಗ ಮಗುವಿನ ದೈಹಿಕ ಸಂಪರ್ಕದಿಂದಾಗುವ ಹಲ್ಲೆಯನ್ನು, ಅದು ಲೈಂಗಿಕ ಸಂಭೊಗ ಮಾಡದೆಯೂ ನಡೆಯುವ ಹಿಂಸೆಯನ್ನು ವಿವರಿಸುತ್ತದೆ ಮತ್ತು ಈ ಅಪರಾಧಕ್ಕೆ ಮೂರು ವರುಷಗಳಿಂದ ಕಡಿಮೆಯಲ್ಲದ ಮತ್ತು ಐದು ವರುಷದವರೆಗೂ ವಿಸ್ತರಿಸಬಹುದಾದ ಜೈಲುವಾಸ ಮತ್ತು ದಂಡವನ್ನು ವಿಧಿಸಲಾಗಿದೆ. ಕಲಂ 8ರಡಿ ಲೈಂಗಿಕ ಹಿಂಸೆಯನ್ನು ವಿವರಿಸುವಾಗ ಮಕ್ಕಳೊಂದಿಗೆ ಸಂಜ್ಞೆ, ಮಾತು, ಹಾಡು, ಮಗುವಿಗೆ ಚಿತ್ರವನ್ನು ತೋರಿಸುವುದು ಮುಂತಾದ ಬಗೆಯ ಹಿಂಸೆಯನ್ನು ಒಳಗೊಂಡಿದೆ, ಮತ್ತು ಅಪರಾಧಕ್ಕೆ ವರುಷಗಳವರೆವಿಗೂ ವಿಸ್ತರಿಸಬಹುದಾದ ಜೈಲು ಶಿಕ್ಷೆ ಮತ್ತು ದಂಡವನ್ನು ವಿಧಿಸಲಾಗಿದೆ. ಈ ಕಾನೂನಿನ ಇನ್ನೊಂದು ಪ್ರಮುಖ ಅಂಶವೆಂದರೆ ಹಿಂಸೆಯನ್ನು 'ತೀವ್ರಸ್ವರೂಪದ' (Aggravated) ಹಿಂಸೆಯೆಂದು ಇನ್ನಷ್ಟು ವಿಸ್ತರಿಸಿ ವ್ಯಾಖ್ಯಾನಿಸಿರುವುದು. ತೀವ್ರಸ್ವರೂಪದ ಲೈಂಗಿಕ ಹಲ್ಲೆಯಡಿ ಬರುವ ಅಪರಾಧಗಳಿಗೆ ಇನ್ನು ಹೆಚ್ಚಿನ ಶಿಕ್ಷೆಯನ್ನು ವಿಧಿಸಲಾಗಿದೆ. ಕಾರಣ ಈ ಕಲಂನಡಿ ಬರುವ

ವ್ಯಕ್ತಿಗಳು ಮಕ್ಕಳನ್ನು ಶಿಕ್ಷಿಸುವವರು ಮತ್ತು ಮಕ್ಕಳ ಬಗ್ಗೆ ಹೆಚ್ಚಿನ ಜವಾಬ್ದಾರಿ ಇರುವವರು ನಡೆಸುವ ಕೃತ್ಯವಾಗಿರುತ್ತದೆ. ಉದಾ: ಪೊಲೀಸ್ ಮಿಲಿಟರಿ, ಯಾವುದೆ ವೈದ್ಯ, ಯಾವುದೇ ಮಕ್ಕಳಾ ಪಾಲನಾ ಕೇಂದ್ರದ ನಿರ್ವಹಣಾಧಿಕಾರಿ ಅಥವಾ ಸದಸ್ಯ, ಮಗುವಿನ ಸಂಬಂಧಿ, ಮುಂತಾದವರು.

ಇವುಗಳ ಜೊತೆಗೆ 12 ವರುಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಮೇಲೆ, ಕೋಮು ಗಲಭೆಗಳ ಸಂದರ್ಭದಲ್ಲಿ ಮಕ್ಕಳನ್ನು ಸಾರ್ವಜನಿಕವಾಗಿ ನಗ್ನಗೊಳಿಸುವುದು, ಮಗುವಿನ ಗುಪ್ತಾಂಗಕ್ಕೆ ತೀವ್ರವಾದ ಹಾನಿಯುಂಟಾಗುವಂತೆ, ಮುಂತಾದ ಕೃತ್ಯಗಳನ್ನು ತೀವ್ರಸ್ವರೂಪದ ಅಪರಾಧವೆಂದು ಪರಿಗಣಿಸಲಾಗಿದೆ. ಸಮಾಜದಲ್ಲಿ ಅತ್ಯಂತ ಜವಾಬ್ದಾರಿಯುಳ್ಳ ಅಂದರೆ ರಕ್ಷಿಸುವವರೆ ಭಕ್ಷಿಸುವಂತೆ ಆಗುವ ಸಂದರ್ಭಗಳು ಸಾಕಷ್ಟು ನಡೆದಿವೆ. ಹಾಗಾಗಿ ಇಂಥ ವ್ಯಕ್ತಿಗಳ ಅಪರಾಧ ಇನ್ನು ಗಂಭೀರವೆಂದು ಪರಿಗಣಿಸಿರುವುದು ಕಾಯಿದೆಯ ಪ್ರಮುಖ ಅಂಶ.

ಮುಂದುವರೆದು ಕಾಯಿದೆಯಲ್ಲಿ 'ವಿಶೇಷ ಬಾಲಾಪರಾಧಿ ಪೊಲೀಸ್ ಘಟಕವನ್ನು ಸ್ಥಾಪಿಸಬೇಕಾಗಿ ಸೂಚಿಸಲಾಗಿದೆ ಮತ್ತು ಈ ಘಟಕಗಳ ಮುಖ್ಯ ಕೆಲಸ ಅಪರಾಧ ದಾಖಲಾದ 24 ತಾಸುಗಳಲ್ಲಿ ದೌರ್ಜನ್ಯಕ್ಕೊಳಗಾದ ಮಗುವನ್ನು ರಕ್ಷಿಸುವುದು ಮತ್ತು ಕಾಳಜಿ ವಹಿಸುವುದು. ಇದರೊಂದಿಗೆ ಕಾಯಿದೆಯು 'ವಿಶೇಷ ನ್ಯಾಯಾಲಯ' ಸ್ಥಾಪಿಸಲು ಅನುವು ಮಾಡಿಕೊಟ್ಟಿದೆ ಮತ್ತು ಈ ನ್ಯಾಯಾಲಯವು ಒಂದು ವರುಷದೊಳಗೆ ಪ್ರಕರಣವನ್ನು ಇತ್ಯರ್ಥಗೊಳಿಸಬೇಕಿದೆ. ಈ ಕಾಯಿದೆಯ ಮತ್ತೊಂದು ವಿಶೇಷ ಅಂಶವೆಂದರೆ ಪ್ರಕರಣ ದಾಖಲಾದ ಸಂದರ್ಭದಿಂದ ಹಿಡಿದು ನ್ಯಾಯಾಲಯದಲ್ಲಿ ಪ್ರಕರಣ ಇತ್ಯರ್ಥ ವಾಗುವವರೆಗೂ ಮಕ್ಕಳಿಗೆ ಯಾವುದೇ ರೀತಿಯ ಅಂಜಿಕೆ ಉಂಟಾಗದಂತೆ ಒಂದು ಆತ್ಮೀಯ ಮತ್ತು ಸ್ನೇಹಪೂರ್ಣ ವಾತಾವರಣ ವನ್ನು ಸೃಷ್ಟಿಸುವುದು. ಇನ್ನು ದಾಖಲಿಸಿಕೊಳ್ಳುವ ಸಂದರ್ಭದಲ್ಲಿ ಮಕ್ಕಳ ಹೇಳಿಕೆಯನ್ನು ದಾಖಲಿಸುವಾಗ ಪೋಲಿಸಿನವರು ಮಗು ವಾಸಿಸುವ ಸ್ಥಳಕ್ಕೆ ಹೋಗುವುದು ಮತ್ತು ಹೋಗುವಾಗ ತಮ್ಮ ಯೂನಿಫಾರಂ ಹಾಕಿರಬಾರದು ಹಾಗೂ ಸಾಧ್ಯವಾದಷ್ಟು ಮಹಿಳಾ ಪೊಲೀಸರೆ ಇರತಕ್ಕದ್ದು. ಇನ್ನು ಹೇಳಿಕೆಯನ್ನು ಮಕ್ಕಳ ಭಾಷೆಯಲ್ಲಿಯೇ ದಾಖಲಿಸಿಕೊಳ್ಳುವುದು. ಹಾಗೆಯೇ ನ್ಯಾಯಾಲಯದಲ್ಲಿಯೂ ಮಕ್ಕಳಿಗೆ ಹಿಂಸೆಯಾಗುವಂತಹ ಯಾವುದೇ ಪ್ರಶ್ನೆಯನ್ನು ಕೇಳುವಂತಿಲ್ಲ. ಸಾರ್ವಜನಿಕ ಅಭಿಯೋಜಕರು ಅಥವಾ ಅಪರಾಧಿ ಪರ ವಕೀಲರು ಮಗುವಿಗೆ ನೇರವಾಗಿ ಪ್ರಶ್ನಿಸುವಂತಿಲ್ಲ. ಅವರು ಕೇಳಬೇಕೆಂದಿರುವ ಪ್ರಶ್ನೆಗಳನ್ನು ನ್ಯಾಯಾಧೀಶರಿಗೆ ನೀಡತಕ್ಕದ್ದು ಮತ್ತು ನ್ಯಾಯಾಧೀಶರು ಅದನ್ನು ಮಗುವಿನ ಭಾಷೆಯಲ್ಲಿ ಮಗುವಿಗೆ ಯಾವುದೇ ಭಯವಾಗದಂತೆ ಕೇಳುವುದು. ಈ ಮಧ್ಯೆ ಮಗು ತನಗೆ ಬೇಕೆಂದೆಷ್ಟು ವಿರಾಮವನ್ನು ಕೂಡ ತೆಗೆದುಕೊಳ್ಳಬಹುದು. ಈ ಎಲ್ಲಾ ಸಂದರ್ಭ ಗಳಲ್ಲೂ ಮಗುವಿನ ಪೋಷಕರು ಜೊತೆಯಲ್ಲೇ ಇರುವಂಥದ್ದು. ಇವೆಲ್ಲವುದರೊಂದಿಗೆ ಮಗುವಿನ ಗುರುತನ್ನು ಯಾವುದೇ ಕಾರಣಕ್ಕೂ ಬಹಿರಂಗಗೊಳಿಸಬಾರದು ಮತ್ತು ಹಾಗೆ ಆದಲ್ಲಿ ಅದು ಶಿಕ್ಷಾರ್ಹ



ಅಪರಾಧವೆಂದು ಕಾಯಿದೆಯಲ್ಲಿ ಸೇರಿಸಲಾಗಿದೆ. ಒಟ್ಟಾರೆ ಕಾಯಿದೆಯು ಮಕ್ಕಳನ್ನು ಒಂದು ಆತ್ಮೀಯ ಮತ್ತು ಸ್ನೇಹಪೂರ್ವ ವಾತಾವರಣದಲ್ಲಿ ನಡೆಸಿಕೊಳ್ಳಬೇಕೆಂಬ ಅಂಶಕ್ಕೆ ಹೆಚ್ಚಿನ ಒತ್ತನ್ನು ನೀಡಲಾಗಿದೆ.

ಈ ಕಾಯಿದೆಯು ಜಾರಿಯಾಗುವ ಸಂದರ್ಭದಲ್ಲಿ ಮಕ್ಕಳು ಎಂದು ಗುರುತಿಸುವ ವಯೋಮಿತಿ ಮತ್ತು ಒಪ್ಪಿತ ಲೈಂಗಿಕ ವಯೋಮಿತಿಯ ಬಗ್ಗೆ ದೊಡ್ಡಮಟ್ಟದ ಚರ್ಚೆ ನಡೆಯಿತು. ಈ ಕಾಯಿದೆಯ ಕರಡನ್ನು ಸಿದ್ಧಪಡಿಸಿದ ಸಮಿತಿಯು ಒಪ್ಪಿತ ಲೈಂಗಿಕ ಕ್ರಿಯೆಯ ವಯೋಮಿತಿಯನ್ನು 16ಕ್ಕೆ ಇರಿಸಬೇಕೆಂದು ಪ್ರಸ್ತಾಪಿಸಿತ್ತು. ಒಪ್ಪಿತ ಲೈಂಗಿಕ ಕ್ರಿಯೆಯನ್ನು ಅತ್ಯಾಚಾರ ಎಂದು ಪರಿಗಣಿಸ ಲಾಗುವುದಿಲ್ಲ. ಆದರೆ ಇದನ್ನು ಒಪ್ಪಿದ ಸಂಸತ್ ವಯೋಮಿತಿಯನ್ನು 18ಕ್ಕೆ ಏರಿಸಿತು. ಈ ವಿಚಾರ ದೊಡ್ಡ ಮಟ್ಟದ ಬಿಸಿ ಬಿಸಿ ಚರ್ಚೆಗೆ ನಾಂದಿ ಹಾಡಿತು. ಬದಲಾಗುತ್ತಿರುವ ಸಾಮಾಜಿಕ ಸಂದರ್ಭಗಳಲ್ಲಿ ಒಪ್ಪಿತ ಲೈಂಗಿಕ ಕ್ರಿಯೆಗೆ ವಯೋಮಿತಿಯನ್ನು 18ಕ್ಕೆ ಇರಿಸುವುದು ಸಮಾಜದಲ್ಲಿ ಇದರ ದುರುಪಯೋಗ ಪಡೆಯುವ ಸಾಧ್ಯತೆ ಹೆಚ್ಚಾಗುತ್ತದೆ ಎಂಬ ವಾದ ನಡೆಯುತ್ತಿದೆ. ಸಾಮಾನ್ಯವಾಗಿ 16ರಿಂದ 18ರ ನಡುವಿನ ಪ್ರಾಯದ ವಯಸ್ಸನ್ನು ಅಪ್ರಬುದ್ಧ ವಯಸ್ಸೆಂದು ಹೇಳಲಾಗುತ್ತದೆ ಮತ್ತು ಆ ಸಂದರ್ಭದಲ್ಲಿ ದೇಹದಲ್ಲಾಗುವ ಬದಲಾವಣೆಗಳಿಂದ ಲೈಂಗಿಕ ಆಸಕ್ತಿ ಬೆಳೆಸಿಕೊಂಡ ಹಲವಾರು ಮಕ್ಕಳು ಅದನ್ನು ಪ್ರಯೋಗಿಸಿಯೂ ಇರುತ್ತಾರೆ. ಇಂಥ ಸಂದರ್ಭಗಳಲ್ಲಿ ಕಾನೂನು ದುರುಪಯೋಗವಾಗುವ ಸಾಧ್ಯತೆ ಹೆಚ್ಚಾಗಿರುತ್ತದೆ ಎಂಬ ಕೂಗು ಕೇಳಿಬರುತ್ತಿದೆ.

ಆದರೆ ಕೆಲವೇ ದುರುಪಯೋಗವಾಗುವ ಪ್ರಕರಣಗಳನ್ನು ಗಣನೆಗೆ ತೆಗೆದುಕೊಂಡು. ಇದಕ್ಕಿಂತ ದೊಡ್ಡದಾದ ಅಪಾಯ, ವಯೋಮಿತಿ ಯನ್ನು 16ಕ್ಕೆ ಇಳಿಸುವುದರಿಂದ ಆಗುತ್ತಿದೆ ಎಂದರೆ ಉತ್ಪ್ರೇಕ್ಷೆಯಾಗ ಲಾರದು. ಏಕೆಂದರೆ ಈಗಾಗಲೇ ಭಾರತದಂಥ ಸಮಾಜದಲ್ಲಿ ತಾಂಡವವಾಡುತ್ತಿರುವ ಮಕ್ಕಳ ವೇಶ್ಯಾವಾಟಿಕೆ, ಕಳ್ಳಸಾಗಾಣಿಕೆ, ಇನ್ನೂ ಚಾಲ್ತಿಯಲ್ಲಿರುವ ಬಾಲ್ಯವಿವಾಹದಂಥ ಪದ್ಧತಿಗಳಿಗೆ ಈ ಪ್ರಸ್ತಾಪ ವರದಾನವಾಗಲಿದೆ. ಉರಿಯುವ ಬೆಂಕಿಗೆ ತುಪ್ಪವೆನ್ನುವಂತೆ ಈ ವಯಸ್ಸಿನ ಸಂದರ್ಭದಲ್ಲಿ ಇರುವ ಡೋಲಾಯಮಾನ ಮನಸ್ಸಿಗೆ ಈ

ಪ್ರಸ್ತಾಪ ಮಕ್ಕಳು ಸಲೀಸಾಗಿ ಬಲಿಪಶುಗಳಾಗಿ ಬಿಡುವ ಸಂದರ್ಭಗಳೇ ಹೆಚ್ಚಾಗಿರುತ್ತವೆ. ಹಾಗಾಗಿ ವಯೋಮಿತಿಯನ್ನು 16ಕ್ಕೆ ಇಳಿಸುವುದರಿಂದ ಮಕ್ಕಳ ಮೇಲೆ ಈಗಾಗಲೇ ಹೆಚ್ಚಾಗುತ್ತಿರುವ ಲೈಂಗಿಕ ಹಿಂಸೆಗೆ ಇನ್ನಷ್ಟು ಪುಷ್ಟೀಕರಿಸುತ್ತಿದೆಯೇ ಹೊರತು ಬೇರೇನೂ ಆಗುವುದಿಲ್ಲ. ಕನಿಷ್ಠ ಇದು ಅಪರಾಧವೆಂದಾದರೆ ಸ್ವಲ್ಪ ಮಟ್ಟಿಗೆ ಕೆಲವರಲ್ಲಾದರೂ ಭಯ ಹುಟ್ಟಿಸಬಹುದೇನೋ.

ಸ್ವಾತಂತ್ರ್ಯ ಬಂದ ಇಷ್ಟು ವರುಷಗಳ ನಂತರ ಮಕ್ಕಳನ್ನು ಲೈಂಗಿಕ ಹಿಂಸೆಯಿಂದ ರಕ್ಷಿಸಲು ಈಗ ಕಾನೂನು ರೂಪಿತವಾಗಿರುವುದು ನಮ್ಮ ದೇಶದಲ್ಲಿ ಮಕ್ಕಳ ರಕ್ಷಣೆ ಮತ್ತು ಹಕ್ಕಿಗೆ ಇರುವ ಪ್ರಾಮುಖ್ಯತೆ ಎಷ್ಟು ಎಂಬುದನ್ನು ಸಾಬೀತು ಪಡಿಸುತ್ತದೆ. ಇನ್ನು ಬಂದಿರುವ ಕಾನೂನು ಎಷ್ಟು ಪರಿಣಾಮಕಾರಿಯಾಗಿ ಕಾರ್ಯಾಚರಣೆಗೆ ಬರುತ್ತದೆ ಎಂಬ ಪ್ರಶ್ನೆಯೂ ಮುಂದಿದೆ. ಏಕೆಂದರೆ ಶೋಷಿತರಾಗಿ ಎಷ್ಟೇ ಕಾನೂನು ಬಂದರೂ ಶೋಷಣೆಯಂತೂ ಕೊನೆಗೊಂಡಿಲ್ಲ. ಹಾಗಾಗಿ ಎಲ್ಲಕ್ಕಿಂತ ಮುಖ್ಯವಾದ ವಿಚಾರ ಸಮಾಜದಲ್ಲಿ ಅಸಹಾಯಕರನ್ನು ಶೋಷಿಸುವ ಮನೋಭಾವ ಬದಲಾಗಬೇಕಿರುವುದು. ಮಹಿಳೆಯರನ್ನು, ಮಕ್ಕಳನ್ನು ಕೇವಲ ಭೋಗದ ವಸ್ತುಗಳಾಗಿ ಕಾಣುವ ಸಾಮಾಜಿಕ ಧೋರಣೆ ಬದಲಾಗಬೇಕು. ಈ ಬದಲಾವಣೆ ಗೊಳಪಡಿಸುವ ಪ್ರಕ್ರಿಯೆಯಲ್ಲಿ ಕಾನೂನಿನದು ಒಂದು ಪಾತ್ರವಷ್ಟೆ. ಇನ್ನು ಉಳಿದಂತೆ ಸಮಾಜದಲ್ಲಿ ಮಕ್ಕಳನ್ನು ಗೌರವದಿಂದ ಕಾಣುವ ವ್ಯವಸ್ಥೆ ಬರಬೇಕು. ಆಗಲೇ ಇಂಥ ಹೀನಾಯ ಹಿಂಸೆಗಳಿಂದ ಮುಕ್ತಿ ಪಡೆಯಲು ಸಾಧ್ಯ. ಇದರ ಜೊತೆಗೆ ಇನ್ನು ಒಂದು ಪ್ರಮುಖ ವಿಚಾರವೆಂದರೆ ನಾವು ನಮ್ಮ ಮಕ್ಕಳನ್ನು ಕೂಡ ಹೆಚ್ಚು ಶಿಕ್ಷಿತರನ್ನಾಗಿ ಮಾಡಬೇಕು. ಮಕ್ಕಳಿಗೆ ಸ್ವಲ್ಪ ಅರಿವು ಬರುವಾಗಲೇ ಅವರ ಮೇಲೆ ನಡೆಯ ಬಹುದಾದ ಹಿಂಸೆಗಳ ಬಗ್ಗೆ ಅರಿವು ಮೂಡಿಸಬೇಕು. ಬಹಳ ಸರಳವಾದ ಭಾಷೆಯಲ್ಲಿ ಯಾರೊಬ್ಬರ ಅಸಹಜ ವರ್ತನೆ ಏನು ಎಂಬುದನ್ನು ಮತ್ತು ಅದನ್ನು ಖಂಡಿಸಬೇಕೆಂಬ ವಿಚಾರವನ್ನು ತಿಳಿಸಿರಬೇಕು. ಮಕ್ಕಳ ಕುಟುಂಬದವರು ಅದರಲ್ಲೂ ಮುಖ್ಯವಾಗಿ ಮಹಿಳೆಯ ಈ ಅನ್ಯಾಯವನ್ನು ಮುಚ್ಚಿಡಲು ಪ್ರಯತ್ನಿಸದೆ ತಪ್ಪಿತಸ್ಥರು ಯಾರೇ ಆಗಲಿ ಅವರಿಗೆ ಸರಿಯಾದ ಪಾಠ ಕಲಿಸಬೇಕು. ಪ್ರತಿಯೊಬ್ಬರು ಧೈರ್ಯ ಮಾಡಿದರೆ ಮುಂದೊಂದು ದಿನ ನಾವು ನಮ್ಮ ಮಕ್ಕಳು ನೆಮ್ಮದಿಯಿಂದ ಬದುಕಬಹುದು. ❑

ಎಲ್ಲಿಂದಲೋ ಬಂದವರು

ಮಹಾನಗರಗಳ ಕಟ್ಟುವವರು
ಬೀದಿಯಲ್ಲಿ ಮಲಗುವವರು
ಮನೆಮನೆಯ ಮನೆಗೆಲಸ ಮಾಡಿ
ಹೊಟ್ಟೆಗೆ ತಣ್ಣೀರು ಬಟ್ಟೆ ಕಟ್ಟಿಕೊಂಡವರು
ಎಲ್ಲಿಂದಲೋ ಬಂದವರು
ಎಲ್ಲಿಯೂ ನೆಲೆ ಇಲ್ಲದವರು.

ತರಕಾರಿ, ಬೇಳೆ, ಕಾಳು, ಅಕ್ಕಿ ಬೆಲೆ ಗಗನಕ್ಕೇರಿ
ಕೊಳ್ಳಲು ಸಾಧ್ಯವಾಗದ ಸ್ಥಿತಿಯವರು
ಮಳೆಯೂ ಇಲ್ಲ ಬೆಳೆಯೂ ಇಲ್ಲದ ಬೆಂಗಾಡಿನಿಂದ
ಉತ್ತರದ ಗಾಳಿಯಲ್ಲಿ ಗುಳೆ ಬಂದ ಇವರು
ಎಲ್ಲಿಂದಲೋ ಬಂದವರು
ಎಲ್ಲಿಯೂ ನೆಲೆ ಇಲ್ಲದವರು.

ಮನೆಯ ಗಚ್ಚು, ಗಾರೆ ಕೆಲಸ ಮುಗಿವವರೆಗೂ
ಅಲ್ಲಿಯೇ ಠಿಕಾಣಿ ಹೂಡಿ ಮಕ್ಕಳು ಬೀದಿಪಾಲು
ಇವರ ಹೆಣ್ಣು ಮಗು ಕಾಣೆಯಾಗುತ್ತದೆ
ಹರೆಯದ ಹೆಣ್ಣು ಹುಡುಗಿಯೂ ಕಾಣೆಯಾಗುತ್ತಾಳೆ
ಪೊಲೀಸರಿಗೆ ವರದಿಯೂ ಆಗುವುದಿಲ್ಲ
ಎಲ್ಲಿಂದಲೋ ಬಂದವರು
ಎಲ್ಲಿಯೂ ನೆಲೆ ಇಲ್ಲದವರು.

ಪುರುಷರಿಗೂ ಮೀರಿಸುವ ದುಡಿಮೆಯವರು
ಇಟ್ಟಂಗಿ, ಸಿಮೆಂಟು, ಕಲ್ಲು, ಸಲಕರಣೆ ಎತ್ತುವವರು
ಗೇಣು ಹೊಟ್ಟೆಗಾಗಿ ಎಲ್ಲ ಸಾಹಸ ಮಾಡುವವರು
ಇವರಿಗಿಲ್ಲ ಪೆನ್‌ಷನ್, ರಿಟಾಯರ್ಮೆಂಟುಗಳು
ಇವರೆಂದಿಗೂ ಸಾಹಸ ಪ್ರಶಸ್ತಿ ಪಡೆಯಲಾರದವರು
ಎಲ್ಲಿಂದಲೋ ಬಂದವರು
ಎಲ್ಲಿಯೂ ನೆಲೆ ಇಲ್ಲದವರು.

ಬಯಲು ಆಲಯದೊಳಗೆ ನೆಲೆನಿಂತು
ಶೌಚ, ಬಚ್ಚಲುಗಳಿಲ್ಲದ ಟೆಂಟಿನಲ್ಲಿ ಬದುಕು
ಇವರಿಗಿಲ್ಲ ಆಧಾರ, ರೇಶನ್, ಚುನಾವಣಾ ಕಾರ್ಡುಗಳು
ಈ ಕಟ್ಟಡ ಮುಗಿದ ಬಳಿಕ ಮತ್ತೊಂದು
ಅಲೆಮಾರಿಗಳಿಗಿಲ್ಲ ನೆಮ್ಮದಿಯ ನಾಳೆಗಳು.
ಎಲ್ಲಿಂದಲೋ ಬಂದವರು
ಎಲ್ಲಿಯೂ ನೆಲೆ ಇಲ್ಲದವರು.

■ಡಾ. ಕೆ. ಷರೀಫಾ




ಮಹಿಳಾ ಅಧ್ಯಯನದ ಹಿರಿಯಕ್ಕ

ವೀಣಾ ಮಜುಮ್‌ದಾರ್ ರವರಿಗೊಂದು ನಮನ

■ ವಿಭೂತಿ ಪಟೇಲ್

ಅನು : ಚಂಪಾವತಿ ಹೆಚ್.ಎಸ್.



ಪ್ರಸಿದ್ಧ ಸ್ತ್ರೀವಾದಿ ಹಾಗೂ ಭಾರತದ ಮಹಿಳಾ ಅಧ್ಯಯನ ಚಳವಳಿಯ ನೇತಾರಿಣಿಯಾಗಿ ಬಹಳ ಜನರ ವಿಶ್ವಾಸ, ಪ್ರೀತಿಗೆ ಪಾತ್ರರಾಗಿದ್ದ ವೀಣಾ ಮಜುಮ್‌ದಾರ್ ಮೇ 30, 2013ರಂದು ನವದೆಹಲಿಯಲ್ಲಿ ಕೊನೆಯುಸಿರೆಳೆದರು. ಆಕೆಗೆ 86 ವರ್ಷ ವಯಸ್ಸಾಗಿತ್ತು.

ವೀಣಾದಿ ಎಂದು ಮಮತೆಯಿಂದ ಕರೆಯಲ್ಪಡುತ್ತಿದ್ದ ಡಾ. ವೀಣಾರವರ ಸಾವಿನಿಂದ ಭಾರತೀಯ ಮಹಿಳಾ ಚಳವಳಿ ಭರಿಸಲಾರದ ನಷ್ಟವನ್ನು ಅನುಭವಿಸಿದೆ. ತಮ್ಮ ವ್ಯಕ್ತಿತ್ವದಲ್ಲಿ ದೂರದೃಷ್ಟಿ, ಗಟ್ಟಿಯಾದ ಇಚ್ಛಾ ವೈಚಾರಿಕತೆಯನ್ನು ಮೈಗೂಡಿಸಿಕೊಂಡಿದ್ದ ವೀಣಾದಿ ಮನುಷ್ಯನ ಒಳ್ಳೆಯತನದಲ್ಲಿ ನಂಬಿಕೆ ಇಟ್ಟ ಪ್ರತಿವಾದಿಯನ್ನು ಒಪ್ಪಿಸಬಲ್ಲಂತಹ ಬಲವಾದ ಮಾತುಗಾತಿ ಕೂಡಾ ಆಗಿದ್ದರು.

ಆಕೆಯ ಉನ್ನತ ಬೌದ್ಧಿಕಮಟ್ಟ ಆಕೆಯಲ್ಲಿ ಯಾವುದೇ ದಂತಗೋಪುರದ ನಡವಳಿಕೆಯನ್ನು ರೂಪಿಸಿರಲಿಲ್ಲ. ಹಾಗಾಗಿ ಆಕೆಯ ಸಹೋದ್ಯೋಗಿಗಳು, ಸಹಪ್ರಯಾಣಿಕರಾದ ಶಿಕ್ಷಣತಜ್ಞರು, ಯೋಜನೆ ರೂಪಿಸುವವರು, ಸಂಶೋಧಕರು ಮತ್ತು ಸ್ತ್ರೀವಾದಿ ಕಾರ್ಯಕರ್ತೆಯರು ಈಕೆಗೆ ಯಾವಾಗಲೂ ಹತ್ತಿರದವರೇ ಆಗಿದ್ದರು. ಆಕೆ ಯಾವಾಗಲೂ ಹೃದಯಸ್ಪರ್ಶಿಯಾಗಿದ್ದು, ಸುಲಭವಾಗಿ ಹತ್ತಿರಕ್ಕೆ ಹೋಗಬಹುದಾದ ವ್ಯಕ್ತಿತ್ವದವರು. ಆ ಕ್ಷಣಕ್ಕೆ ಅರ್ಥಮಾಡಿಕೊಂಡು ಹತ್ತಿರ ವಾಗಬಲ್ಲವರು. 'ಸೆಂಟರ್ ಫಾರ್ ವಿಮೆನ್ ಸ್ಟಡೀಸ್ ಡೆವಲೆಪ್‌ಮೆಂಟ್'ನ ನಿರ್ದೇಶಕರಾದಾಗ ಅವರ ಜ್ಞಾನವನ್ನು ಹಾಗೂ ಸಂಸ್ಥೆಯ ಸಂಪನ್ಮೂಲಗಳನ್ನು ಹಂಚಿಕೊಳ್ಳುವಲ್ಲಿ ಆಕೆ ಅತ್ಯಂತ ವಿಶಾಲ ಹೃದಯದವರಾಗಿದ್ದರು.

ಆಕೆಯ ಚಾರ್ಮ್ ಇದ್ದದ್ದು ಆಕೆಯ ಸ್ಫೂರ್ತಿದಾಯಕ ವ್ಯಕ್ತಿತ್ವದಲ್ಲಿ. ಆಶಾಕಿರಣ ಬಿಂಬಿಸುವ ಸದಾ ಆಕೆಯ ಮುಖದ ನಗು, ಸರಳವಾದ ನಡೆ – ನುಡಿ, ಸರಸ, ಚಾಣಾಕ್ಷತನದಿಂದ ಕತೆ ಹೇಳುವ ರೀತಿ, ಬಹಳ ಮುಖ್ಯವಾದುದೆಂದರೆ ಪ್ರಾಮಾಣಿಕ ಉದ್ದೇಶದಿಂದ ಕೂಡಿದ್ದ ನಂಬಿಕೆಯನ್ನು ಇಟ್ಟುಕೊಳ್ಳುವ ಎದೆಗಾರಿಕೆ. ಅವರ ಈ ವ್ಯಕ್ತಿತ್ವವೇ ಯೂನಿವರ್ಸಿಟಿ ಗ್ರ್ಯಾಂಟ್ ಕಮಿಶನ್‌ನ ನಿರ್ಧಾರ ತೆಗೆದುಕೊಳ್ಳುವ ವಿಭಾಗದಲ್ಲಿ ಇದ್ದಾಗಿರಬಹುದು, ಭಾರತದ ಕೌನ್ಸಿಲ್ ಆಫ್ ಸೋಶಿಯಲ್ ಸೈನ್ಸ್ ರಿಸರ್ಚನಲ್ಲಿ ಇರುವಾಗ ಆಗಿರಬಹುದು, ಭಾರತದ ಯೋಜನಾ ಕಮಿಶನ್‌ನಲ್ಲಿ ಮತ್ತು ಮಂತ್ರಿ ಮಂಡಲಗಳಲ್ಲಿ ಅಥವಾ ಅವುಗಳಿಂದ ಆಚೆ ಇರುವುದಾಗಿರಬಹುದು –ಎಲ್ಲಿ ಕೆಲಸ ಮಾಡಿದರೂ ಅಲ್ಲಿ ಅವರು ಯೋಜನೆ ರೂಪಿಸುವಲ್ಲಿ ಹೊಂದಿದ್ದ ಪರಮಾಧಿಕಾರವನ್ನು ವಿವರಿಸಿ ಹೇಳುತ್ತದೆ. ಭಾರತದ ಮಹಿಳಾ ಅಧ್ಯಯನ ಚಳವಳಿ ರೂಪಿಸಿದ ಅತ್ಯುತ್ತಮ ಭಾರತದ ವಾದ ಪಟುಗಳಲ್ಲಿ ಒಬ್ಬರಾದ ಈಕೆ

ವೀಣಾ ದೀ ಜೊತೆ ಮಾತುಕತೆ


ಮಹಿಳಾವಾದದ ಮುಂಚೂಣಿಯಲ್ಲಿದ್ದವರು, ಪಂಡಿತರು ಮತ್ತು ಮಹಿಳಾ ಅಭಿವೃದ್ಧಿ ಅಧ್ಯಯನ ಕೇಂದ್ರದ ಸಂಸ್ಥಾಪಕ ಸದಸ್ಯರು. ಇವರು ತಮ್ಮ 86ನೇ ವಯಸ್ಸಿನಲ್ಲಿ 30–5–2013ರಂದು ದೆಹಲಿಯಲ್ಲಿ ದೈವಾಧೀನರಾದರು. 2002ರಲ್ಲಿ ಪರೋಮಿತ ವೋರಾ ತಮ್ಮ Unlimited Girl ಸಿನಿಮಾ ನಿರ್ಮಾಣಕ್ಕಾಗಿ ಮಜುಮ್‌ದಾರ್‌ರವರನ್ನು ಸಂದರ್ಶಿಸಿದ್ದರು. ಈ ಸಿನಿಮಾಕ್ಕಾಗಿ ಭಾರತದಲ್ಲಿನ ಮಹಿಳಾ ಚಳವಳಿಯ ಚರಿತ್ರೆಯನ್ನು ಚಿತ್ರಿಸಲು ಮಹಿಳಾವಾದಿಗಳು, ಚಳುವಳಿಗಾರರು ಮತ್ತು ಸಾಧಾರಣ ಮಹಿಳೆಯ ರೊಂದಿಗೆ ಚರ್ಚಿಸಲಾಯಿತು. ಮಜುಮ್‌ದಾರ್‌ರವರು ಮಹಿಳಾವಾದದ, ಸಮಾನತೆಯ ಅರ್ಥ ಮತ್ತು ತಮ್ಮ ಅಜ್ಜಿಯೊಂದಿಗಿನ ಮಾತುಕತೆ ಎಷ್ಟು ಮುಖ್ಯವೆಂಬುದನ್ನು ಚರ್ಚಿಸಿದ್ದಾರೆ. ಮಜುಮ್‌ದಾರರೊಂದಿಗೆ ಪರೋಮಿತಾ ವೋರಾರವರ ಸಂವಾದದ ಸಂಕ್ಷಿಪ್ತ ಸಂಪಾದನೆ.

ಕನ್ನಡಕ್ಕೆ: ನಿರ್ಮಲ ಕೃಷ್ಣಾ

✪ ✪ ✪

ಯಾರಾದರೂ ನೀವು ಮಹಿಳಾವಾದಿ ಎಂದು ಹೇಳಿದರೆ, ಅದರ ಅರ್ಥವೇನು?

ಈ ದೇಶದ ಜನರು, ಅಥವಾ ಬೇರೆ ಎಲ್ಲಡೆ ಜನರು ಮಹಿಳಾವಾದವನ್ನು ನೋಡುವ ರೀತಿಯಂತೂ ಖಂಡಿತ ಅಲ್ಲ. ಯಾಕೆಂದರೆ, ನನ್ನ ಮಟ್ಟಿಗೆ ಹೇಳುವುದಾದಲ್ಲಿ, ಎಲ್ಲಾ ಸಂಪ್ರದಾಯಿಕ ಪಾತ್ರಗಳನ್ನು ನಾನು ನಿಭಾಯಿಸಿ ದ್ದೇನೆ ಮತ್ತು ಅದೆಲ್ಲವನ್ನು ನಾನು ಖುಷಿಪಟ್ಟಿದ್ದೇನೆ. ಆದರೆ ನಾನು ಸ್ವಾತಂತ್ರ್ಯ ಚಳವಳಿಯ ಫಲ, ಆ ಪೀಳಿಗೆಯ ವ್ಯಕ್ತಿ ಮತ್ತು ಭಾರತದ ವಿಷಯದಲ್ಲಿ ಹೇಳುವುದಾದಲ್ಲಿ, ಮಾನವ ಸಮಾನತೆಯ ಬಗ್ಗೆ ನಂಬಿಕೆ ಎಲ್ಲರದಾಗಿತ್ತು, ಅದರಿಂದ ನನ್ನ ಪೀಳಿಗೆಯ ಕೆಲವು ಮಹಿಳೆಯರನ್ನು ಭಾರತ ಸಂವಿಧಾನದ ಸಮಾನತೆಯ ಉಪಬಂಧದ ಅನುಕೂಲವನ್ನು ಪಡೆದಂತಹ ಮೊಟ್ಟ ಮೊದಲ ಪೀಳಿಗೆ ಎಂದು ನಾನು ಕರೆಯುತ್ತೇನೆ.



ಆದರೆ ನಾನು ಭಾರತದ ಮಹಿಳಾವಾದಿಯಲ್ಲಿ ಮತ್ತು ಮತ್ತಿತರರಲ್ಲಿ ವ್ಯತ್ಯಾಸವನ್ನು ಗುರುತಿಸುತ್ತೇನೆ. ಪ್ರಸ್ತುತೆಯ ಕಾರಣ ಜನರಿಗೆ ಈ ರೀತಿ ತಮ್ಮನ್ನೇ ಪ್ರಶ್ನಿಸಿ ಕೊಳ್ಳುವ ಅನುಭವವಾಗಿದೆ. ಇದು ನಮ್ಮ ಹಿಂದಿನ, ಅದರಲ್ಲೂ ಸಿದ್ಧಾಂತಗಳನ್ನು ಹೀರಿಕೊಂಡ ಸ್ವಾತಂತ್ರ್ಯ ಪೀಳಿಗೆಯ ಸದಸ್ಯರು, ಮಹಿಳೆಯಾಗಿ ಮತ್ತು ಸಾಮಾಜಿಕ ತಜ್ಞೆಯ ಚರಿತ್ರೆಯೊಂದಿಗೆ ಥಳಕು ಹಾಕಿಕೊಂಡಿದೆ. ಆದ್ದರಿಂದ ಆ ಕೋಪ ನಮ್ಮನ್ನು ಇನ್ನು ಬಿಟ್ಟು ಹೋಗಿಲ್ಲ. ನಾವು ಸೋತಿದ್ದೇವೆ. ಹಾಗಾಗಿ ಯಾವ ರೀತಿ ಆಗಿರುವ ನಷ್ಟವನ್ನು ಇಲ್ಲದ ಹಾಗೆ ಮಾಡುವುದು ಮೊದಲ ಆದ್ಯತೆಯಾಯಿತು. ದೇಶದಲ್ಲಿನ ಈ ಎರಡು ಅವಳಿ ಚಳವಳಿಯಲ್ಲಿ 25 ವರ್ಷಕ್ಕಿಂತ ಹೆಚ್ಚು ವರುಷ ತೊಡಗಿಸಿ ಕೊಂಡಿರುವವಳಾಗಿ, ಸಾಮಾಜಿಕ ತಜ್ಞೆಯಾಗಿ, ಮುಖ್ಯವಾಗಿ ಮಹಿಳಾ ಚಳವಳಿಯ ಇತಿಹಾಸಗಾರಳಾಗಿ ಮತ್ತು ಮಹಿಳಾ ಅಧ್ಯಯನದ ಚಳವಳಿಗಾರಳಾಗಿ, ನನ್ನ ಅನುಭವದಲ್ಲಿ ಭಾರತದ ಮಹಿಳಾವಾದದ ಬಗ್ಗೆ ಹೇಳುವುದಾದಲ್ಲಿ, ನಾವೆಲ್ಲರೂ ಮತ್ತು ದೇಶದ ಬಹುಸಂಖ್ಯಾತ ಮಹಿಳೆಯರ ಕಲಿಕೆಯಲ್ಲಿ ಮಹಿಳಾವಾದ ವ್ಯಕ್ತವಾಗುತ್ತದೆ.

✪ ✪ ✪

ನೀವು ಎರಡು ಅವಳಿ ಚಳವಳಿಯ ಬಗ್ಗೆ ಉಲ್ಲೇಖಿಸಿರುವಿರಿ. ಅದರ ಅರ್ಥವೇನು?

ಮಹಿಳಾ ಅಧ್ಯಯನದ ಚಳವಳಿ ಮತ್ತು ಮಹಿಳಾ ಚಳವಳಿ. ಅವು ಒಂದರೊಂದಿಗೆ ಕಂದುತ್ತವೆ. ಆದರೆ ಅವೆರಡೂ ಮುಖ್ಯ, ಏಕೆಂದರೆ, ನಾವು ರೂಪಾಂತರಗೊಳ್ಳುತ್ತಿರುವ ರಾಜಕೀಯದ ಬಗ್ಗೆ ಮಾತಾಡುತ್ತಿದ್ದೇವೆ ಮತ್ತು ಅಧ್ಯಯನವು ಮುಂದುವರೆಯಬೇಕು. ಅವು ಶಿಕ್ಷಣ ವ್ಯವಸ್ಥೆಯೊಂದಿಗೆ ಸೇರಿ ಹರಡಿಕೊಳ್ಳುತ್ತವೆ. ಹಿಂದಿನಂತಲ್ಲದೆ ಮಾಹಿತಿಗಳನ್ನು ಸಿಗುವಂತೆ ಮಾಡುತ್ತವೆ, ಇದಕ್ಕೆಲ್ಲಾ ಸ್ವಲ್ಪ ಸಮಯವಾಗಬಹುದು. ಬಹಳ ನಿಧಾನವಾಗಿ ಕ್ರಮೇಣವಾಗಿ ಆಗುವ ಪ್ರಕ್ರಿಯೆ. ಆದರೆ ಷೇಕ್ಸ್ಪಿಯರ್ ತಾನು ಜೀವಿತ ಅವಧಿಯಲ್ಲಿದ್ದಕ್ಕಿಂತ, ಇಂದು ಹೆಚ್ಚು ಶಕ್ತಿಶಾಲಿ!

✪ ✪ ✪

ಎಲ್ಲೆಡೆ ಪ್ರಚಲಿತವಾಗುತ್ತಿದೆ ಎನ್ನಲಾಗುವ ಒಂದು ರೀತಿಯ ವೈಯಕ್ತಿಕತೆಯ ಅರಿವು ಮತ್ತು ಅದು ಬೇರೆ ಮಹಿಳಾ ಗುಂಪುಗಳಲ್ಲಿ ಪ್ರಾಬಲ್ಯಗೊಳ್ಳುತ್ತಿದೆ ಎಂಬ ಭಾವನೆಯ ಬಗ್ಗೆ, ನೀವು ಸ್ವಲ್ಪ ತಾಳ್ಮೆ ಕಳೆದುಕೊಂಡಿರುವ ಹಾಗೆ ಕೇಳಿಸುತ್ತಿದೆ?

ಯಾವುದೇ ಚಳವಳಿಯಲ್ಲಿ ತೊಡಗಿಸಿಕೊಂಡಿರುವ ವ್ಯಕ್ತಿಯು ತಮ್ಮ ಸ್ವ-ಅರಿವನ್ನು ಅತ್ಯುನ್ನತಕ್ಕೆ ಕೊಂಡೊಯ್ಯುವಂತಹ ಪ್ರಯತ್ನವನ್ನು ಮಾಡದೇ ಇರುವುದಿಲ್ಲ ಎಂದು ನನಗನ್ನಿಸುವುದಿಲ್ಲ. ಆದರೆ ಸ್ವಪ್ರಜ್ಞೆಯು ಇನ್ನೊಬ್ಬರೊಂದಿಗಿನ ಸಂಪರ್ಕಕ್ಕೆ ಎಷ್ಟರಮಟ್ಟಿಗೆ ಸಾಧನವಾಗುತ್ತದೆ ಎಂಬುದು ಸ್ವಪ್ರಜ್ಞೆಯ ಫಲದ ಮೇಲೆ ಅವಲಂಬಿತವಾಗಿರುತ್ತವೆ. ವ್ಯಕ್ತಿಯು ತನ್ನ ಸ್ವಪ್ರಜ್ಞೆಯನ್ನು ಬಳಸುವ ಬಗೆಯೇ ಸ್ವಾವಲಂಬನೆ/ಸಶಕ್ತತೆಯ ಪ್ರಕ್ರಿಯೆ. ಸರ್ಕಾರಕ್ಕೆ ನಾನು ಕೇಳುವ ಪ್ರಶ್ನೆಗಳಲ್ಲಿ ನನ್ನ ಇಷ್ಟವಾದ ಪ್ರಶ್ನೆ – ಯಾವಾಗ ಸರ್ಕಾರ "ಮಹಿಳೆಯರ ಸ್ವಾವಲಂಬನೆ/ಸಶಕ್ತತೆ" ಪದವನ್ನು ಬಳಸುತ್ತದೆಯೋ, ಆಗ ನಾನು 'ಯಾರು ಯಾರನ್ನು ಸ್ವಾವಲಂಬಿಗಳಾಗಿ/ಸಶಕ್ತರನ್ನಾಗಿ ಮಾಡುತ್ತಿದ್ದಾರೆ?' ಎಂದು ಕೇಳುತ್ತೇನೆ.

✪ ✪ ✪

ನೀವು ಬೇರೆ ಜನರನ್ನು ಸಶಕ್ತರನ್ನಾಗಿ ಮಾಡುವುದಿಲ್ಲ. ಜನರು ತಮ್ಮನ್ನು ತಾವೇ ಸಶಕ್ತರನ್ನಾಗಿ ಮಾಡಿಕೊಳ್ಳುತ್ತಾರೆ. ಈ ಪ್ರಕ್ರಿಯೆಯಲ್ಲಿ, ಅವರು ಬಹಳಷ್ಟು ಜನರು ಸಶಕ್ತರಾಗಲು ಸಹಾಯ ಮಾಡುತ್ತಾರೆ. ತುಂಬಾ ಗೊಂದಲಮಯವಾಗಿದೆ ಎನಿಸುತ್ತದೆ ಅಲ್ಲವೇ?

ಹಾಗಾಗಿಯೇ, ಮಹಿಳಾ ಚಳವಳಿಯು ಒಂದು ಉದ್ದೇಶಪೂರ್ವಕ ವಿದ್ಯಾರ್ಥಿಗಳನ್ನು, ಶಿಕ್ಷಕರನ್ನು, ಸಂಶೋಧಕರನ್ನು, ಮಹಿಳಾ ಸಂಘಟನೆಗಳನ್ನು, ಕಾರ್ಮಿಕ ಸಂಘಟನೆಗಳನ್ನು, ಅಧಿಕಾರಿಗಳನ್ನು, ರಾಜಕಾರಣಿಗಳನ್ನು ಹಾಗೂ ಕಾನೂನು ಮಾಡುವವರನ್ನು ಕಾರ್ಯನಿರತರಾಗುವಂತೆ ಪ್ರೇರೇಪಿಸು ತ್ತಿದ್ದರು.

ವಿನಾದಿಯವರಿಗೆ ಆಕರ್ಷಕ ಪದಗಳನ್ನು ಜೋಡಿಸುವಲ್ಲಿ ಜಾಣ್ಮೆ ಇತ್ತು. 'ಮಹಿಳಾ ಅಧ್ಯಯನ ಚಳವಳಿ', 'ಭಾರತದ ಮನಸ್ಸು ವ್ಯಾಖ್ಯಾನಿಸಲ್ಪಟ್ಟ ಇಬ್ಬಗೆಯ 'ಮಾ' ವರ್ಸಸ್ 'ಮಾಲ್' – ತಾಯ್ತನವನ್ನು ಆರಾಧಿಸುವ ಹಾಗೂ ಉಳಿದ ಮಹಿಳೆಯರನ್ನು ವ್ಯಾಪಾರಿಕರಣಗೊಳಿಸುವ ವಿರೋಧಿ ತತ್ವವನ್ನು ಸೂಚಿಸುತ್ತದೆ.

ಅವರ ಸಮಕಾಲೀನರು ಅಂದರೆ ವಿಶ್ವವಿದ್ಯಾನಿಲಯದ ಶಕ್ತಿಯುತ ಪುರುಷರು, ಸಂಶೋಧನಾ ಸಂಸ್ಥೆಗಳು ಹಾಗೂ ಮಂತ್ರಿ ಮಂಡಳಗಳು ಅವರನ್ನು 'ಬುಲ್‌ಡೋಜರ್' ಎಂದು ಕರೆದರೆ, ಮಹಿಳಾ ಬೌದ್ಧಿಕವಲಯ ಹಾಗೂ ಕಾರ್ಯಕರ್ತೆಯರಿಗೆ ಅವರು ನಂಬಲರ್ಹ ಗೆಳತಿಯಾಗಿ ಹಾಗೂ ವ್ಯಕ್ತಿತ್ವ ರೂಪಿಸುವವರಾಗಿ ಕಂಡಿದ್ದರು.

1981ರಲ್ಲಿ ಎಸ್.ಎನ್.ಡಿ.ಟಿ. ಮಹಿಳಾ ವಿಶ್ವವಿದ್ಯಾನಿಲಯ ಆಯೋಜಿಸಿದ್ದ ಮಹಿಳಾ ಅಧ್ಯಯನ ಕಾನ್ಫರೆನ್ಸ್‌ನಲ್ಲಿ, 1985ರಲ್ಲಿ 'ದಶಕದ ಕೊನೆ' ಭಾರತದ ಮಹಿಳೆಯರ ಸ್ಥಿತಿ-ಗತಿ ಕುರಿತಾಗಿ ಪರ್ಯಾಯ ವರದಿ ತಯಾರಿಸುವಾಗ, 1986ರಲ್ಲಿ 'ಭಾರತದ ಲಿಂಗ ಆಯ್ಕೆ, ಗರ್ಭಪಾತ ಹಾಗೂ ಭ್ರೂಣಹತ್ಯೆ ವಿರೋಧಿ' ವಿಶ್ವ ಸಾಮಾಜಿಕ ಕಾನ್ಫರೆನ್ಸ್‌ಗಾಗಿ, 1988ರಲ್ಲಿ 'ಮಹಿಳಾ ಅಭಿವೃದ್ಧಿಗೋಸ್ಕರ ಮಕ್ಕಳ ಆರೈಕೆ ಪ್ರಾಮುಖ್ಯವಾದುದು'. – ವಿವಿಧ ಬಗೆಯ ತಳಪಾಯ ಹೊಂದಿದ ಸಂಶೋಧನ ಪ್ರಾಜೆಕ್ಟ್‌ನಲ್ಲಿ ನಾನು ವೀಣಾದಿಯ ಜೊತೆ ಬಹಳ ಹತ್ತಿರದಿಂದ ಕೆಲಸ ಮಾಡಿದ್ದೆ.

ವೀಣಾ ಮಜುಮ್‌ದಾರ್ ಹುಟ್ಟಿದ್ದು 1927ರಲ್ಲಿ. ಶಾಲೆ ಮುಗಿಸಿದ್ದು ಕಲ್ಕತ್ತಾದಲ್ಲಿ. ಅವರು ಆನರ್ಸ್ ಮುಗಿಸಿದ್ದು ಬನಾರಸ್ ಹಿಂದೂ ವಿಶ್ವವಿದ್ಯಾಲಯ ಹಾಗೂ ಕಲ್ಕತ್ತಾ ವಿಶ್ವವಿದ್ಯಾಲಯದ ಆಶುತೋಶ್ ಕಾಲೇಜಿನಲ್ಲಿ. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಿಂದ ಡಿ.ಫಿಲ್ ಪದವಿ. 1960ರಲ್ಲಿ ಮಗದೊಮ್ಮೆ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಸಂಶೋಧನ ವಿದ್ಯಾರ್ಥಿನಿಯಾಗಿ ಸೇರಿ ಎರಡು ವರ್ಷದಲ್ಲಿ ಡಿ.ಫಿಲ್ ಪದವಿ ಪಡೆದರು. ಕೆಲವು ವರ್ಷಗಳ ಕಾಲ ಪಾಟ್ನಾ ಹಾಗೂ ಬರ್‌ಹ್ಯಾಂಪುರ್ ವಿಶ್ವವಿದ್ಯಾಲಯಗಳಲ್ಲಿ ರಾಜ್ಯಶಾಸ್ತ್ರ ಉಪನ್ಯಾಸಕಿಯಾಗಿದ್ದರು. ಆನಂತರ ಆಕೆ ಯು.ಜಿ.ಸಿ.

ಸೇರಿದರು. ಎನರ್‌ಜೆಟಿಕ್ ಅಧಿಕಾರಿಯಾಗಿ ಯು.ಜಿ.ಸಿ.ಯಲ್ಲಿ ತಮ್ಮದೇ ಆದ ಛಾಪು ಮೂಡಿಸಿದರು. ಸಿಮ್ಲಾದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಸ್ಟಡೀಸ್‌ನ ಫೆಲೋ ಆಗಿ ಕೂಡಾ ಈಕೆ ಆಯ್ಕೆಯಾಗಿದ್ದರು.

1972ರಲ್ಲಿ ಮಹಿಳೆಯರ ಸ್ಥಿತಿ-ಗತಿ ಕುರಿತು ವರದಿ ಮಾಡುವುದಕ್ಕೆ ಯು.ಎನ್. ನಿರ್ಧರಿಸಿದಾಗ ಭಾರತ ಸರ್ಕಾರ ಅದನ್ನು ಮಾಡಲು ಒಪ್ಪಿತ್ತು. ವೀಣಾದಿ ಯವರನ್ನು ಭಾರತದ ಮಹಿಳೆಯರ ಸ್ಥಿತಿ-ಗತಿಯ ಸಮಿತಿಗೆ ಸದಸ್ಯ ಕಾರ್ಯದರ್ಶಿಯಾಗಿ ನೇಮಕ ಮಾಡಲಾಗಿತ್ತು. 'ಟುವರ್ಡ್ಸ್ ಈಕ್ವಾಲಿಟಿ'ಯಂತಹ ಮುಖ್ಯ ವರದಿಯನ್ನು ತಯಾರಿಸುವಲ್ಲಿ ಅವರ ಕೊಡುಗೆ ಗಮನೀಯವಾಗಿತ್ತು. ಭಾರತೀಯ ಮಹಿಳೆಯರ ಬದುಕಿನ ಹಣೆಬರಹವನ್ನು ನಿರ್ಧರಿಸುವ ವಸ್ತು-ಸ್ಥಿತಿ ಹಾಗೂ ವಿಚಾರಧಾರೆಗಳ ವಿವರಿಸುವಲ್ಲಿ ಅವರಲ್ಲಿದ್ದ ಸಂಶೋಧನೆ ಹಾಗೂ ವಿಮರ್ಶಾ ವಿಧಾನದಿಂದಾಗಿ 1970, 1980 ಹಾಗೂ 1990ರಲ್ಲಿ ಹಾಗೂ ಆ ಕಾಲ ಘಟ್ಟದಲ್ಲಿ ಆಕೆ ಎಲ್ಲರೂ ಅರಸುವಂತಹ ಬೌದ್ಧಿಕ - ಕಾರ್ಯಕರ್ತೆ ಯಾಗಿದ್ದರು.

1974ರಲ್ಲಿ ಆಲ್ ಇಂಡಿಯಾ ಮೆಡಿಕಲ್ ಸೈನ್ಸ್ ಭ್ರೂಣದ ವಂಶಾವಳಿಯ ಸ್ಥಿತಿ-ಗತಿ ತಿಳಿಯಲು ಆಮ್ನಿಯೋಸಿನ್ ಥಿಸಿಸ್‌ನ ಮಾದರಿ ಸರ್ವೆ ಮಾಡಿದಾಗ ವಿನಾದಿ ಸುಲಭವಾಗಿ 11000 ಗರ್ಭಿಣಿ ಮಹಿಳೆಯರು ಸ್ವಯಂ ಆಗಿ ಸಂಶೋಧನೆಗೆ ಸೇರುವಂತೆ ಮಾಡಿದರು. ಈ ಸ್ವಯಂಭೂತ ಗರ್ಭಿಣಿಯರ ಮುಖ್ಯ ಉದ್ದೇಶ ಭ್ರೂಣದ ಲಿಂಗ ಪತ್ತೆ ಮಾಡುವುದಾಗಿತ್ತು. ಫಲಿತಾಂಶ ಪ್ರಕಟವಾದೊಡನೆಯೇ ಹೆಣ್ಣು ಶಿಶುವೆಂದು ಹೇಳಲ್ಪಟ್ಟ ಹೆಂಗಸರು ಗರ್ಭಪಾತಕ್ಕಾಗಿ ಬೇಡಿಕೆ ಇಟ್ಟರು. 'ಏಮ್ಸ'ನ ತರುಣ ಸಂಶೋಧಕಿ ಈ ಅಂಶವನ್ನು ವಿನಾದಿಯವರ ಜೊತೆ ಹಂಚಿಕೊಂಡರು. ಆಗ ಅವರು ಮಹಿಳಾ ನಿಯೋಗವೊಂದನ್ನು ಸಂಘಟಿಸಿ ಅವರೊಡನೆ ಆರೋಗ್ಯ ಸಚಿವರನ್ನು ಭೇಟಿ ಮಾಡಿ ಲಿಂಗ ಪತ್ತೆ ಮಾಡಿ ಗರ್ಭಪಾತ ಮಾಡಿಸಿಕೊಳ್ಳುವುದಕ್ಕೆ ಆಮ್ನಿಯೋಸಿನ್ ಥಿಸಿಸ್ ಬಳಸಿಕೊಳ್ಳುವುದನ್ನು ನಿಲ್ಲಿಸಬೇಕೆಂದು ಒತ್ತಾಯಿಸಿದರು.

1975ರ ಅಂತರಾಷ್ಟ್ರೀಯ ಮಹಿಳಾ ವರ್ಷದ ಸಂದರ್ಭದಲ್ಲಿ ವೀಣಾದಿ ಐ.ಸಿ.ಎಸ್.ಎಸ್.ಆರ್.ನ ಮಹಿಳಾ ಅಧ್ಯಯನ ನಿರ್ದೇಶಕಿಯಾಗಿ 5 ವರ್ಷಗಳ ಕಾಲ ನೇಮಕಗೊಂಡರು. (1975-1980). ನವದೆಹಲಿಯ ಸೆಂಟರ್ ಫಾರ್ ವಿಮೆನ್ ಡೆವಲೆಪ್‌ಮೆಂಟ್ ಸ್ಟಡೀಸ್‌ನ ಸ್ಥಾಪಿತ ನಿರ್ದೇಶಕಿಯಾಗಿ 1980ರಿಂದ 1991ರ ವರೆಗೆ ಕೆಲಸ ಮಾಡಿದರು. ಆನಂತರ ಹಿರಿಯ ಫೆಲೋ ಆಗಿ ಸಿ.ಡಬ್ಲ್ಯೂ.ಡಿ.ಎಸ್. ಹಾಗೂ ಐಪಿನಾಯಕ್ ರಾಷ್ಟ್ರೀಯ ರಾಜಕೀಯ ನಿಲುವನ್ನು ತಳೆಯಿತು. 1980ರಲ್ಲಿ ವಿಧಾನಸಭೆಯಲ್ಲಿ ಮತ್ತು ಲೋಕಸಭೆಯಲ್ಲಿ ಯಾವುದೇ ರೀತಿಯ ಒತ್ತಾಯ ಮಾಡದೆ ಚುನಾವಣೆಯ ಮೂಲಕ, ಸ್ಥಳೀಯ ಸರ್ಕಾರಗಳಲ್ಲಿ ದಲಿತ ಮತ್ತು ಆದಿವಾಸಿಗಳ ನ್ಯಾಯಯುತ ಪ್ರತಿನಿಧಿತ್ವದೊಂದಿಗೆ ಮೀಸಲಾತಿ ಮತ್ತು ಚುನಾವಣೆಯ ಬೇಡಿಕೆಯನ್ನು ಮಾಡಿದ್ದೇವೆ. "ನಮಗೆ ಹೊಸ ಸಂತತಿಯ ಕೆಳಹಂತದ ನಾಯಕರು ಬೇಕಿದ್ದಾರೆ" ಎಂಬ ಮಾತನ್ನು ಸುಶೀಲಾ ಗೋಪಾಲನ್ 1988ರಲ್ಲಿ ಹೇಳಿದ್ದರು.

ಯುವ ಮಹಿಳೆಯರನ್ನು ಮಾತನಾಡಿಸಿದಾಗ ನಾನು ಗಮನಿಸಿದ ಒಂದು ವಿಷಯವೇನೆಂದರೆ, ನಿಮಗೆ ಗೊತ್ತೇ ಅವರು ಯಾವಾಗಲೂ "ನಾವು ಮಹಿಳಾವಾದಿಗಳಲ್ಲ"ವೆಂದು ಹೇಳುತ್ತಾರೆ.

ಓಹೋ, ಅದು ಬಹಳ ಹಳೆಯದು, ನನ್ನ ಗೆಳತಿ ಅಲೂ ದಸ್‌ದೂರ್ ಯಾವಾಗಲೂ "ನಾನು ಮಹಿಳಾವಾದಿಯಲ್ಲ" ಎಂಬ ಮಾತಿನೊಂದಿಗೆ ಶುರುಮಾಡುತ್ತಾಳೆ. ಅವಳು ಪ್ರತಿ ಮಹಿಳಾ ಅಧ್ಯಯನದ ರಾಷ್ಟ್ರೀಯ ಸಭೆಗಳಿಗೆ ಬರುತ್ತಿದ್ದಳು, ಬಹಳ ICCSR (Indian Centre for Corporate Social Responsibility) ಮಹಿಳಾ ಅಧ್ಯಯನದ ಸಲಹಾ ಸಮಿತಿಯ ಸಕ್ರಿಯ ಸದಸ್ಯೆ.



ಮೊಟ್ಟ ಮೊದಲನೆಯದಾಗಿ, ಅಲೂ ದಸ್‌ದೂರ್, ಉಷಾ ಮೆಹ್ತಾ, ಸ್ವಾತಂತ್ರ್ಯ ಪೀಳಿಗೆಯ ಸದಸ್ಯರನ್ನಾಗಿ ತಮ್ಮನ್ನು ಕಂಡವರು, ಅವರು ಸ್ವಾತಂತ್ರ್ಯ ಚಳವಳಿಯ ಭಾಗವಾಗಿದ್ದವರು. ಮತ್ತು ಅವರು ಸಂವಿಧಾನಿಕ ಸಮಾನತೆಯನ್ನು ತಮ್ಮ ನಡೆಯಲ್ಲಿ ಒಪ್ಪಿಕೊಂಡವರು. ನನ್ನಂತೆಯೇ, ಅವರು ಯಾವತ್ತೂ ತಮ್ಮನ್ನು ತಾವು ವಿಂಗಡಿಸಿ ನೋಡುತ್ತಿರಲಿಲ್ಲ. ಹಾಗಾಗಿ, ಮಹಿಳಾವಾದವು ವಿಂಗಡನೆಯ ವಿರುದ್ಧ ಯೋಚಿಸುವುವವ ರೊಂದಿಗೆ ಸೇರಿ ಕೊಂಡಿತ್ತು ನೋಡಿ.

ಇವತ್ತು, ನೀವು ಅಲೂ ದಸ್‌ದೂರ್ ಅವರನ್ನು ಕೇಳಿದರೆ, ಅವಳು ಆಕ್ಷೇಪಣೆ ಎತ್ತಲಾರಳು. ಉಷಾ ಮೆಹ್ತಾ, ತನ್ನನ್ನು ಮಹಿಳಾವಾದಿಯೆಂದು ಕರೆಯಬೇಡಿರೆಂದು ಹೇಳುವುದನ್ನು ಬಿಟ್ಟಿದ್ದಾರೆ. ಮ್ರಿಣಾಲ್(ಗೊರೆ), ಸುಶೀಲಾ ಗೋಪಾಲನ್ ರವರು ಮಹಿಳಾವಾದಿಯೆಂದು ಕರೆಸಿಕೊಳ್ಳುವುದರ ಬಗ್ಗೆ ತಕರಾರು ಮಾಡುವುದಿಲ್ಲ. 1976ರಲ್ಲಿ ನಾನು ರೋಮಿಲಾ ತಾಪರ್‌ನ್ನು ಕೇಳಿದ್ದೆ "ಮಹಿಳಾ ಇತಿಹಾಸಕ್ಕೆ ನಿಮ್ಮ ಕೊಡುಗೆ ಕೊಡುವುದರ ಬಗ್ಗೆ" ಅದಕ್ಕೆ ಆಕೆ ಮಹಿಳಾ ಇತಿಹಾಸವನ್ನು ತಾನು ನಂಬುವುದಿಲ್ಲ ಎಂದು ಉತ್ತರಿಸಿದ್ದಳು.

ಇತ್ತೀಚೆಗೆ ನಾನು ಆಕೆ ಬರೆದ ಶಕುಂತಲಾ ಪುಸ್ತಕವನ್ನು ಓದಿದೆ ಮತ್ತು "ತಡವಾದ ಧನ್ಯವಾದಗಳು, ಈ ಕಾರಣಕ್ಕಾಗಿಯೇ ನಾನು ಯಾವಾಗಲೂ ಮಹಿಳಾ ಇತಿಹಾಸದಲ್ಲಿ ನಂಬಿಕೆ ಇರಿಸಿದ್ದೇನೆಂದು ಅವಳಿಗೆ ಕಾಗದ ಬರೆದೆ. ಅದಕ್ಕೆ ಮರು ಉತ್ತರವಾಗಿ ಆಕೆ ನನಗೆ ತುಂಬಾ ಪ್ರಿಯವಾದ ಕಾಗದವನ್ನು ಬರೆದಳು."ನಿಮಗೆ ಗೊತ್ತಿಲ್ಲ ಏನೆಂದರೆ ನಾನು ನನ್ನನ್ನು ಅತೀ ಪಾಶ್ಚಾತ್ಯ ಮಹಿಳಾವಾದಿಯೆಂದು ಕರೆಯುತ್ತಿರುವ ಸಂಸ್ಕೃತಜ್ಞರ ಮತ್ತು ಬೇರೆ ಗ್ರಂಥ ಪಂಡಿತರಿಂದ ನಾನು ಧಾಳಿಗೆಗೊಳಗಾಗಿದ್ದೇನೆ. ನೀವೂ ನನ್ನೊಡನಿದ್ದೀರಿ!"

✪ ✪ ✪

ನೀವು ನಿಮ್ಮ ಸಾಂಪ್ರದಾಯಿಕ ಪಾತ್ರಗಳನ್ನು ನಿಭಾಯಿಸಿರುವಿರಿ. ಬಹಳಷ್ಟು ಮಹಿಳೆಯರಿಗೆ, ಸಂಪ್ರದಾಯಿಕ ಪಾತ್ರಗಳನ್ನು ನಿಭಾಯಿಸುವುದು ಒಂದು ರೀತಿಯ ಅಧೀನಗೊಳಗಾಗುವ ಸಾಧನವೆಂದೆನ್ನಿಸುವುದು, ಅಲ್ಲವೇ?

ಆ ರೀತಿ ನೋಡಬೇಡಿ. ಎಲ್ಲಿಯವರೆವಿಗೂ ಒಬ್ಬರಿಗೆ ಸಾಂಪ್ರದಾಯಿಕ

ಪಾತ್ರಗಳು ಅಧೀನಗೊಳಪಡುವ ಸಾಧನಗಳಾಗಿ ಕಾಣುವುದಿಲ್ಲವೋ ಅಲ್ಲಿಯವರೆವಿಗೂ ಅಲ್ಲ. ನಾನು ನನ್ನ ಅಮ್ಮನನ್ನು ನೆನಪಿಸಿಕೊಳ್ಳುತ್ತೇನೆ. ನೀವು ಹಿಂದಿನ ಪೀಳಿಗೆಯವರಾದ ನಿಮ್ಮ ಕುಟುಂಬದವರದೊಳಗಿನ ನೆನಪುಗಳನ್ನು ಕೆದಕಿ ಎಳೆಯನ್ನು ಕಟ್ಟಿರೆಂದು, ನಾನು ಬಹಳಷ್ಟು ಮಹಿಳೆಯರನ್ನು, ಅದರಲ್ಲೂ ಮುಖ್ಯವಾಗಿ ಮಹಿಳಾ ಅಧ್ಯಯನದ ಗುಂಪು/ವಿದ್ಯಾರ್ಥಿಗಳಿಗೆ ಹೇಳುತ್ತಿರುತ್ತೇನೆ. ಅಪರ್ಣಾ ವಾಲುಸೆ, ಇತಿಹಾಸ ತಜ್ಞೆ, ಅವರನ್ನು ತಮ್ಮ ಅಜ್ಜಿಯ ಮೇಲೆ ಕೆಲವು ಕೆಲಸ ಮಾಡುವಂತೆ ಒಪ್ಪಿಸಲು ನನಗೆ ತುಂಬಾ ವರ್ಷಗಳೇ ಬೇಕಾದವು. ಆಕೆ ತನ್ನ ಕುಟುಂಬದ ಪ್ರಾಚೀನವನ್ನು ಕೆದಕಲು ಶುರುಮಾಡಿದಾಗ ಬಹಳಷ್ಟು ತಿಳಿದುಕೊಳ್ಳ ತೊಡಗಿದಳು. ನಂತರ ನನಗೆ "ನನ್ನ ಅಜ್ಜಿಯಲ್ಲ. ಅವರ ಹಿಂದಿನ ಪೀಳಿಗೆಯವರು ಇನ್ನಷ್ಟು ಶಕ್ತಿಶಾಲಿ ಮತ್ತು ದಂಗೆಕೋರರು" ಎಂದು ಹೇಳಿದಳು, ನಾನು ಸರಿ ಬರೆಯಲಿಕ್ಕೆ ಶುರುಮಾಡೆಂದು ಹೇಳಿದೆ,' ಎಲ್ಲಾ ಮಾಹಿತಿಗಳನ್ನು ಸಂಗ್ರಹಮಾಡಿದ ನಂತರ ಆಕೆ ನನ್ನಲ್ಲಿಗೆ ಬಂದು ಹೇಳಿದಳು. "ಕ್ಷಮಿಸು ಎಲ್ಲವೂ ಉಲ್ಟಾವಾಗುತ್ತಿದೆ. ನಾವು ಅಧೀನಕ್ಕೊಳಪಟ್ಟ ಜನರು!" ನಾನು, "ಸರಿ, ಈಗ ನೀನು ಪದವೀಧರಳಾಗಿದ್ದೀಯಾ." ಎಂದೆ!

ತಾವು ಮಹಿಳಾವಾದಿಗಳಲ್ಲವೆಂದು ಹೇಳುವ ಅಥವಾ ಮಹಿಳಾ ಚಳವಳಿಯೊಂದಿಗೆ ತೊಡಗಿಸಿಕೊಳ್ಳಲಿಕ್ಕೆ ಇಚ್ಛಿಸದ ಯುವ ಜನರಿಗೆ ಕುಟುಂಬ, ಪ್ರೀತಿ ಪಾತ್ರರಾದವರನ್ನು, ಮಮತೆಯ ಸಂಬಂಧಗಳು, ಮುಂತಾದವುಗಳನ್ನು ಕಳೆದುಕೊಳ್ಳುವೆವೆಂಬ ಭಯವಿರುತ್ತದೆ...

ಅವರು ಅರ್ಥಮಾಡಿಕೊಂಡಿದ್ದಾರೆಂದು ನನಗನ್ನಿಸುವುದಿಲ್ಲ! ಚಳವಳಿಯೇ ಎಷ್ಟು ಪ್ರೀತಿ ಮತ್ತು ವಾತ್ಸಲ್ಯವನ್ನು ಉತ್ಪತ್ತಿ ಮಾಡುತ್ತವೆ. ಇದನ್ನು ನಂಬಲಾರದಂಥದ್ದು. ಯಾರಿಗಾದರೂ ಭಯ ಪಡಬೇಕೆಂದರೆ. ಯಾವಾಗಲೂ ಭಯದ ಕನಸನ್ನು ಕಾಣಬಹುದು ನೋಡು. ಆದರೆ ಯಾವಾಗಲೂ ಬದುಕಿನಲ್ಲಿ ಭಯ ಪಡುತ್ತಲೇ ಇರುವುದಾದರೂ ಹೇಗೆ. ಭಯವನ್ನು ಜಯಿಸುವ ಮತ್ತು ಈ ಎಲ್ಲಾ ಚಳವಳಿಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ನಮಗೆಲ್ಲರಿಗೂ ಭಯವನ್ನು ಬಿಡುವುದಕ್ಕೆ ಸಹಾಯವಾಗಿದೆ. ಭಯ ಪಡುವುದು ಸಾಮಾನ್ಯ ಮತ್ತು ಯುವ ಜನರಿಗದು ಜಾಸ್ತಿ ಎಂದು ನನ್ನಗನ್ನಿಸುತ್ತದೆ.

✪ ✪ ✪

ನಾವು ಯಾವಾಗಲೂ ಸಮಾನತೆಯ ಬಗ್ಗೆ ಮಾತನಾಡುತ್ತೇವೆ. ಸಮಾನತೆಯೆಂದರೇನು?

ಸಮಾನತೆಯಲ್ಲಿ ಬಹಳ ಮುಖ್ಯವಾದ ವಿಷಯವೆಂದರೆ ಘನತೆ ಮತ್ತು ಈಗ ನಾವು ಅದಕ್ಕೆ ಸ್ವಾಯತ್ತತೆಯನ್ನು ಸೇರಿಸಿದ್ದೇವೆ. ಹಾಗಾಗಿ ಘನತೆ ಮತ್ತು ಸ್ವಾಯತ್ತತೆಯಿಂದ ಸಮಾನತೆ ಮತ್ತಷ್ಟು ಯೋಗ್ಯವಾಯಿತು. ಆದರೆ ಅದಕ್ಕೆಂತಲೇ ನಾನು ನಂ.1 ಅಂದರೆ ನ್ಯಾಯವೆಂದು ಹೇಳುತ್ತೇನೆ. ನ್ಯಾಯಕ್ಕಾಗಿ ಬೇಡಿಕೆ ಯಾವಾಗಲೂ ಇದ್ದೇ ಇದೆ. ಭಾರತದ ವಿಷಯದಲ್ಲಿ ಹೇಳುವುದಾದಲ್ಲಿ, ರಾಜಕೀಯದ ಅವಶ್ಯಕತೆಯಿಂದಾಗಿ ಮಾನವನ ಸಮಾನತೆಯ ಬಗ್ಗೆ ನಂಬಿಕೆ ಅವಶ್ಯಕವಾಯಿತು. ಇಲ್ಲವಾದ್ದಲ್ಲಿ ಭಾರತದ ರಾಷ್ಟ್ರ ಸಾಧ್ಯವಾಗುತ್ತಿರಲಿಲ್ಲ, ಅಷ್ಟೇ. ಹಾಗಾಗಿ ಪ್ರಜಾಪ್ರಭುತ್ವ ಕೇವಲ ಆಯ್ಕೆಯ ಸಿದ್ಧಾಂತವಾಗಿರಲಿಲ್ಲ. ಅದೊಂದು ರಾಜಕೀಯ ಅಗತ್ಯವಾಗಿತ್ತು.

ಫೆಲೋ ಐ.ಸಿ.ಎಸ್.ಎಸ್.ಸಿ.ನಲ್ಲಿ ಎರಡು ವರ್ಷ ಕೆಲಸ. 1996ರಿಂದ 2013ರ ವರೆಗೆ ಡಾ. ವೀಣಾ ಮಜುಮ್‌ದಾರ್ ಅವರು ನವದೆಹಲಿಯ ಸೆಂಟರ್ ಫಾರ್ ವಿಮೆನ್ಸ್ ಸ್ಟಡೀಸನ ಚೇರ್ ಪರ್‌ಸನ್ ಆಗಿದ್ದರು. ಆಕೆ ಭಾರತದ ಮಹಿಳಾ ಅಧ್ಯಯನ ಸಂಘಟನೆಯ ಹೃದಯ ಹಾಗೂ ಆತ್ಮ ಆಗಿದ್ದರೆಂದರೆ ತಪ್ಪಾಗಲಾರದು.

ವೀಣಾದಿಯುವರ ಬರವಣಿಗೆ ಆಭಿವೃದ್ಧಿಯ ಕುರಿತಾದ ಸೃಜನಶೀಲ ಪ್ರಯತ್ನಗಳಿಗೆ ದಾರಿದೀಪವಾಗಿದೆ. ಆಕೆಯ ನೆನಪುಗಳ ಸಂಗ್ರಹ 'ಮೆಮೊರೀಸ್ ಆಫ್ ರೋಲಿಂಗ್ ಸ್ಟೋನ್' – 2010ರಲ್ಲಿ ಜುಬಾನ್ಸ ಬುಕ್‌ನವರಿಂದ ಪ್ರಕಟಗೊಂಡಿದೆ. ಈ ಪುಸ್ತಕ ಆಕೆಯ ಶಿಸ್ತಿನ, ಯೋಜನೆಗಳ, ಕಾರ್ಯವೈಖರಿಯ ಪ್ರಖರ ದಾಖಲೆಗಳನ್ನು ಹಾಗೂ ವಿವರಣೆಗಳನ್ನು ನೀಡುತ್ತದೆ. ಹಾಗೂ ಆಕೆಯ ಸಂಘಟನೆ 'ಮೂವರ್ಸ್ ಎಂಡ್ ಶೇಕರ್ಸ' ಜೊತೆಗೂಡಿ ಮಾಡಿದ ಯೋಜನೆಗಳನ್ನು ವಿವರಿಸುತ್ತದೆ. ಪ್ರಾಮುಖ್ಯವಾದ ಪುಸ್ತಕಗಳ ಪ್ರಕಟಣೆಗಳಿಂದಾಗಿ ವೀಣಾದಿಯುವರು ನೆನಪು ನಮ್ಮಲ್ಲಿ ಸದಾ ಹಸಿರಾಗಿರುತ್ತದೆ.

Education & Social Change: Three Studies on nineteenth Century India. Indian Institute of Advances Study, 1972.

Role of Rural Women in Development. University of Sussex. Institute of Develpoment Studies. Allied Publishers, 1978.

Symbols of Power. Studies on the Political Status of women in India Allied 1979.

Emergence of the Women's question in India and the role of Women Studies. Centre for Women's Development Studies, 1985.

Peasant women organize for Empowerment. The Bankura Experiment. Centre for Women's Development Studies 1989.

❑

ಬೆಂಬಲಿಗರೇ,

ಈ ಸಂಚಿಕೆಯನ್ನು ಹೊರತರುವಲ್ಲಿ ನಮ್ಮೊಟ್ಟಿಗೆ ಕೈಜೋಡಿಸಿರುವ ಬಿ.ಎಚ್. ರಮಾಕುಮಾರಿ ಮತ್ತು ಅನ್ನಪೂರ್ಣ ವೆಂಕಟನಂಜಪ್ಪ ಹಾಗೂ ಮಾನಸ ಬಳಗದವರಿಗೆ ಹಾಗೂ ಲೇಖನ, ಪತ್ರಗಳ ಮೂಲಕವೂ ನಮ್ಮ ಉತ್ಸಾಹವನ್ನು ಇಂಗದಂತೆ ನೋಡಿಕೊಳ್ಳುತ್ತಿರುವ ನಿಮ್ಮೆಲ್ಲರಿಗೂ ನಾವು ಸದಾ ಋಣಿ.



■ ಸುಚಿತ್ರ ನಾಯಕ್

ಫೆಮಿನಿಸಮ್ ಎಂದರೆ ಏನು? ಎಂದು ನೀವು ನನಗೆ ಕೇಳಿದರೆ ತಕ್ಷಣ ನನಗೆ ನೆನಪಿಗೆ ಬರುವುದು ಬೇಸಿಗೆ ರಜೆಯಲ್ಲಿ ಅಜ್ಜಿ ಹೇಳಿದ ಕಥೆಗಳು. ಒಂದು ನಾಣ್ನುಡಿಯ ಪ್ರಕಾರ "If you want to understand today, you have to search yesterday". ಹಾಗಾಗಿ ಇವತ್ತಿನ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಬೇಕಾದರೆ, ನಾವು ಹಿಂತಿರುಗಿ ನೋಡಲೇಬೇಕು. ಇತಿಹಾಸದ ಮಾಹಿತಿ ನನಗೆ ಅಷ್ಟು ಇಲ್ಲದಿದ್ದರೂ ನನ್ನ ವಂಶವೃಕ್ಷದ ಇತಿಹಾಸದ ಸಹಾಯದೊಂದಿಗೆ ಮಹಿಳೆಯರ ಅವಸ್ಥೆಯಲ್ಲಾದ ಬದಲಾವಣೆಗಳನ್ನು ಅರ್ಥೈಸಿಕೊಳ್ಳಲು ಇಲ್ಲೊಂದು ಪುಟ್ಟ ಪ್ರಯತ್ನ ಮಾಡುತ್ತೇನೆ. ನನ್ನ ಅಜ್ಜಿಯ ಕಥೆಗಳ ಹಿರೋಯಿನ್ ನನ್ನ ಮುತ್ತಜ್ಜಿ. ಆ ದಿನಗಳಲ್ಲಿ ಹೆಣ್ಣುಮಕ್ಕಳ ಸಾಮರ್ಥ್ಯ ಅವರು ಮಾಡಿದ ಅಡುಗೆಯ ರುಚಿಯ ಮೇಲೆ ನಿರ್ಧರಿಸಲಾಗುತ್ತಿತ್ತಂತೆ. ಎಷ್ಟೇ ಬುದ್ಧಿವಂತೆಯಾಗಿರಲಿ ಅಡುಗೆ ಮಾಡಲು ಬರದಿದ್ದರೆ ಅವಳು ಸಮಾಜದಲ್ಲಿ ವಿಫಲ ವ್ಯಕ್ತಿ, ಇಡೀ ಹೆಣ್ಣು ಜಾತಿಗೆ ಅವಮಾನ. ಈ ನಿಟ್ಟಿನಲ್ಲಿ ನೋಡಿದರೆ ನನ್ನ ಮುತ್ತಜ್ಜಿ ಅಡುಗೆಮನೆಯ ಹೀರೋಯಿನ್ ಎ ಸಹಿ. ಅವರ ಪಾಕಶಾಲೆಯ ಅದ್ಭುತಕಾರ್ಯಗಳು ಇನ್ನೂ ನಮ್ಮ ಮನೆಯಲ್ಲಿ ದಂತಕಥೆಯಾಗಿ ಉಳಿದಿವೆ! ಈ ಕಥೆಗಳ ನಿರೂಪಕಿ, ನನ್ನ ಅಜ್ಜಿ ಕೂಡ ಒಂದು ದೊಡ್ಡ ಪ್ರೇರಣೆ. ಆರ್ಥಿಕ ಕಷ್ಟಗಳನ್ನು ಧೈರ್ಯದಿಂದ ಎದುರಿಸಿ, ಐದು ಮಕ್ಕಳನ್ನು ನೆಮ್ಮದಿಯ ವಾತಾವರಣದಲ್ಲಿ ಬೆಳೆಸಿದರು. ಅದೃಷ್ಟವಶಾತ್, ಅಜ್ಜಿ ಕನಿಷ್ಠ ಶಾಲಾ ಶಿಕ್ಷಣ ದೊರೆಯಲು ಸಾಧ್ಯವಾಯಿತು. ಅವರ ಮಗಳು, ನನ್ನ ಸೂಪರ್ ವುಮನ್ ಅಮ್ಮ, ಮನೆಯಲ್ಲೂ ಹಾಗು ಹೊರಗೂ ಮಹಿಳೆ ಸಲೀಸಾಗಿ ಜವಾಬ್ದಾರಿಯನ್ನು ವಹಿಸಬಹುದೆಂದು ಸಾಬೀತು ಮಾಡಿದರು. ಇಂತಹ ನೋವು ನಲಿವಿನ ಕಥೆಗಳನ್ನು ಕೇಳಿದ ಸಲುವಾಗಿ ನನ್ನ ಮನಸ್ಸಿನಲ್ಲಿ ಒಂದು ಪ್ರಶ್ನೆ ಹುಟ್ಟಿ ಬರುತ್ತದೆ. ಇವತ್ತಿನ ತಲೆಮಾರಿನ ಮಕ್ಕಳು ಅವರ ತಾಯಿಯರ ಬಗ್ಗೆ ಆಗಲಿ ಅಥವಾ ಸಾಮಾನ್ಯವಾಗಿ ಮಹಿಳೆಯರ ಬಗ್ಗೆ ಆಗಲಿ, ಎಂಥ ಮನೋಭಾವವನ್ನು ಹೊಂದಿದ್ದಾರೆ? ಅವಳು ಎಲ್ಲವನ್ನೂ ನಿರ್ವಹಿಸಬಲ್ಲಳಾ? ಅತ್ಯುತ್ತಮ ಗೃಹಿಣಿ, ತಾಯಿ, ಹೆಂಡತಿ ಎಂಬ ಪದವಿ ಪಡೆದ ಒಬ್ಬ ಮಹಿಳೆ ಅತ್ಯುತ್ತಮ ಬಾಸ್, ಸಹೋದ್ಯೋಗಿ, ಸ್ವಉದ್ಯೋಗಿ ಎಂಬಂತಹ ಯೋಗ್ಯ ಪದವಿಗಳನ್ನು ಪಡೆಯಬಲ್ಲಳಾ?

ನಾನು ಸ್ತ್ರೀವಾದಿ ಎಂದು ಜನರ ಮುಂದೆ ತನ್ನನ್ನು ಗುರುತಿಸಿದರೆ, ಅವರ ಗೊಂದಲ ನೋಡಿ ನಗು ಬರುತ್ತದೆ. ಸುತ್ತಿಬಳಸಿ ಮಾತಾಡಿ, ಅವರು ನನ್ನ ತಂದೆತಾಯಿಯರನ್ನು 'ಅವಳು ಎಂದು ಮದುವೆಯಾಗುತ್ತಾಳೇ?" ಎಂಬ ಪ್ರಶ್ನೆ ಕೂಡ ಕೆಲವೊಮ್ಮೆ ಹಾಕುತ್ತಾರೆ. ಆದರೆ, ದುಃಖದ ಸಂಗತಿ ಎಂದರೆ ಬಹುಜನರಿಗೆ ಸ್ತ್ರೀವಾದದ ತತ್ವಗಳ ಬಗ್ಗೆ ಮಾಹಿತಿಯೇ ಇಲ್ಲ. ಗೊತ್ತಿದ್ದರೂ ಫೆಮಿನಿಸಮ್ ಮೂಲಭೂತವಾಗಿ ಪುರುಷ ದ್ವೇಷದ ಮೇಲೆ ಆಧಾರಿತವಾದುದು ಎಂಬ ತಪ್ಪು ಅರಿವು ಇರುವುದೇ ಹೆಚ್ಚು. ಇವತ್ತಿನ ಸಂದರ್ಭದಲ್ಲಿ, ಸ್ತ್ರೀವಾದದ ಪ್ರಶ್ನೆ ಯಾರು ಯಾರ ಮೇಲೆ ಪ್ರಭುತ್ವ ಜೀರುವುದು ಎಂಬುದು ಅಲ್ಲ. ಮಹಿಳೆಗೆ ತಕ್ಕಾಗಿರುವ ಮರ್ಯಾದೆ ಮತ್ತು ಗೌರವ ಅವಳಿಗೆ ದೊರಕುತ್ತಿದೆಯಾ? ಎಂಬುದು. ಇವತ್ತು ಸಮಾಜದಲ್ಲಿ ಕೊರತೆ ಇರುವುದೆಂದರೆ ಎಲ್ಲರಿಗೆ, ಜಾತಿ, ಲಿಂಗ, ಮತದ ಭೇದವಿಲ್ಲದೆ, ಅವರ ಸಾಮರ್ಥ್ಯ ಸಾಧಿಸಲು ಸಮಾನ ಶಿಕ್ಷಣ ಹಾಗೂ ವ್ಯವಸ್ಥೆಗಳ ಲಭ್ಯತೆ. ನನ್ನ ಪ್ರಕಾರ ನಿಜವಾದ ಸ್ತ್ರೀವಾದ ಎಂದರೆ ನಮ್ಮ ಹಕ್ಕಿಗಾಗಿ ಮತ್ತು ನ್ಯಾಯಕ್ಕಾಗಿ ಹೋರಾಡುವುದು.

ಮಹಿಳೆಯ ಜೀವನ ಸ್ವಲ್ಪಮಟ್ಟಕ್ಕಾದರೂ ಸಲೀಸಾದರೂ, ಇನ್ನೂ ಬಹಳ ಮೈಲಿಕಲ್ಲುಗಳನ್ನು ಆವಳು ದಾಟಬೇಕಾಗಿದೆ. ಅವಳ ಆರ್ಥಿಕ ಸ್ಥಾನಮಾನದ ಪ್ರತಿ ಮನೋಭಾವ ಸರಿಯಾದ ದಿಕ್ಕಿನಲ್ಲಿದ್ದರೂ, ಅವಳ ಯೋಗ್ಯತೆ ಹಾಗೂ ವಚನ ಬದ್ಧತೆ ಪದೆ ಪದೆ ಪ್ರಶ್ನಿಸಲಾಗುತ್ತದೆ. ಇವೆಲ್ಲ ಸರಿಯಾದರೆ ಬಹುಶ ಇವತ್ತಿನ ಮಕ್ಕಳೂ ಅವರ ತಾಯಂದಿರ ಜೀವನದ ಅದ್ಭುತ ಪಯಣದ ಬಗ್ಗೆ ನೂರಾರು ದಂತಕಥೆಗಳನ್ನು ಹೇಳಬಲ್ಲರು.

❑

ಸಮುದಾಯದ ಮಹಿಳೆಯರಲ್ಲಿ ಮೂಡಿಸಿದೆ ಆತ್ಮಸ್ಥೈರ್ಯ... ಇದು ರೇಡಿಯೋ ಸಿದ್ಧಾರ್ಥದ ಕಾರ್ಯ

■ ರಶ್ಮಿ ಅಮ್ಮೆಂಬಳ



'ಒಂದು ಮಾತು ಯೋಳ್ತೀನಿ ಇವತ್ತಿನವರ್ಗೂ ನಾನ್ ಎಲ್ಲರೆದುರು ನಿಂತು ಮಾತಾಡಿದೋಳಲ್ಲ. ನಂಗೆ ಓದು ಬರಹ ತಿಳಿಯೊಲ್ಲ, ಸಾಲಿ ಮಕ ನೋಡಿಲ್ಲ. ಈ ಪೋಗ್ರಾಂ ನನ್ಗೆ ಸ್ಟೇಜ್ ಹತ್ತಿ ಓದಿರೋ ಜನದ್ಮುಂದೆ ನಿಂತು ಮಾತಾಡೋಕೆ ಶಾನೆ ಧೇರ್ಯ ನೀಡಿದೆ. ಇದು ಶಿವಪ್ಪನಾಣೆಗೂ ಸತ್ಯ. ಡೆಲ್ಲಿಯೋರ್ಗೆ ಅಂಗೇನೇ ರೇಡಿಯೋ ಸಿದ್ಧಾರ್ಥದೋರನ್ನ ಚೆನ್ನಾಗಿಟ್ಟಿರ್ಲಿ'. ಇದು 60ರ ಪ್ರಾಯದ ಮಧುಗಿರಿಯ ಕೃಷಿ ಕಾರ್ಮಿಕೆ ನರಸಮ್ಮನವರ ಮನದಾಳದ ಮಾತುಗಳು.

ಇತ್ತೀಚೆಗೆ ನವದೆಹಲಿಯ ಕಾಮನ್‌ವೆಲ್ತ್ ಎಜುಕೇಶನಲ್ ಮೀಡಿಯಾ ಸೆಂಟರ್ ಫಾರ್ ಏಶಿಯಾ (ಸೆಮ್ಕಾ) ಪ್ರಾಯೋಜಕತ್ವದಲ್ಲಿ ತುಮಕೂರಿನ ಸಮುದಾಯ ಬಾನುಲಿ ರೇಡಿಯೋ ಸಿದ್ಧಾರ್ಥ 90.8 ಎಫ್.ಎಮ್ ಸಮುದಾಯದ ಮಹಿಳಾ ಪ್ರಸಾರಕಿಯರಿಗಾಗಿ ಸಮುದಾಯ ಬಾನುಲಿ ಕಾರ್ಯಕ್ರಮಗಳನ್ನು ರೂಪಿಸುವುದರ ಸಲುವಾಗಿ ಮೂರು ದಿನಗಳ ಕಾರ್ಯಾಗಾರವನ್ನು ಏರ್ಪಡಿಸಿತ್ತು. ಮನೆಯ ಆಧಾರ ಸ್ತಂಭವಾಗಿದ್ದ ಗಂಡನನ್ನು ಕಳೆದುಕೊಂಡು ಹಲವು ವರ್ಷಗಳು ಸಂದಿದ್ದು, ವೃದ್ಧಾಪ್ಯಕ್ಕೆ ಕಾಲಿಟ್ಟಿರುವ ನರಸಮ್ಮನವರಿಗೆ ಜೀವನೋತ್ಸಾಹ ಇನ್ನೂ ಕುಂದಿಲ್ಲ. ಕೃಷಿ ಚಟುವಟಿಕೆಗಳಲ್ಲಿ ಕೂಲಿ ಕಾರ್ಮಿಕೆಯಾಗಿ ದುಡಿಯುವ ನರಸಮ್ಮ ಜನಪದ ಹಾಡುಗಳನ್ನು ಹಾಡಬಲ್ಲವರಾಗಿದ್ದಾರೆ. ಈ ನರಸಮ್ಮ ಬೇರಾರೂ ಅಲ್ಲ.ರೇಡಿಯೋ ಸಿದ್ಧಾರ್ಥದಲ್ಲಿ ನಡೆದ ಸಮುದಾಯದ ಮಹಿಳಾ ಪ್ರಸಾರಕಿಯರ ಕಾರ್ಯಾಗಾರದಲ್ಲಿ ಮೂರು ದಿನವೂ ತಪ್ಪದೇ ಭಾಗವಹಿಸಿದ ಉತ್ಸಾಹದ ಖನಿ!

ಈ ಹಿಂದೆ ಬೆಂಗಳೂರಿನಲ್ಲಿ ನಮ್ಮ ಸಮುದಾಯ ಬಾನುಲಿ ಕೇಂದ್ರದ ಓರ್ವ ಮಹಿಳಾ ಸಿಬ್ಬಂದಿ ಹಾಗೂ ಸಮುದಾಯದ ಇಬ್ಬರು ಮಹಿಳಾ ಪ್ರತಿನಿಧಿಗಳಿಗೆ ಸಮುದಾಯ ಬಾನುಲಿ ಕಾರ್ಯಕ್ರಮಗಳನ್ನು ರೂಪಿಸುವುದರ ಕುರಿತು ಸೆಮ್ಕಾ ನಾಲ್ಕು ದಿನಗಳ ತರಬೇತಿಯನ್ನು ನೀಡಿ ಸಜ್ಜುಗೊಳಿಸಿತ್ತು. ಅಲ್ಲಿ ತರಬೇತಿ ಪಡೆದ ಆ ಮೂರು ಮಂದಿ ಸಮುದಾಯ ಬಾನುಲಿ ರೇಡಿಯೋ ಸಿದ್ಧಾರ್ಥದಲ್ಲಿ ಸ್ಥಳೀಯ ಸಮುದಾಯದ ಹತ್ತು ಮಂದಿ ಮಹಿಳೆಯರಿಗೆ ತಾವು ಪಡೆದ ತರಬೇತಿಯನ್ನು ನೀಡಬೇಕೆಂದು ತಿಳಿಸಿತ್ತು. ಆ ಪ್ರಕಾರ ತುಮಕೂರಿನ ಮೊಟ್ಟ ಮೊದಲ ಸಮುದಾಯ ಬಾನುಲಿ ರೇಡಿಯೋ ಸಿದ್ಧಾರ್ಥದಲ್ಲಿ ಸೆಮ್ಕಾ ಪ್ರಾಯೋಜಕತ್ವದಲ್ಲಿ ಆಯೋಜಿಸಲಾದ ಮೂರು ದಿನಗಳ ಮಹಿಳಾ ಪ್ರಸಾರಕಿಯರ ಕಾರ್ಯಾಗಾರದಲ್ಲಿ ಸ್ಥಳೀಯ ಸಮುದಾಯದ ಹದಿನೇಳು ಮಂದಿ ಮಹಿಳೆಯರು ಭಾಗವಹಿಸಿದ್ದರು ಕೂಡಾ! ಇವರಲ್ಲಿ ಕೃಷಿ ಕೂಲಿ ಕಾರ್ಮಿಕರು, ವಿದ್ಯಾರ್ಥಿನಿಯರು, ಅಂಗನವಾಡಿ ಹಾಗೂ ಪ್ರಾಥಮಿಕ ಶಾಲಾ ಶಿಕ್ಷಕಿಯರು ಹೀಗೆ ವಿವಿಧ ವರ್ಗದ, ವಿವಿಧ ವಯೋಮಾನದ ಮಹಿಳೆಯರು ಪಾಲ್ಗೊಂಡಿದ್ದರು. ಸೆಮ್ಕಾದ ಪ್ರಕಾರ ಕೇವಲ ಹತ್ತು ಮಂದಿ ಮಹಿಳೆಯರಿಗೆ ತರಬೇತಿ ನೀಡಿದ್ದರೆ ಸಾಕಿತ್ತು. ಸಮುದಾಯ ಬಾನುಲಿ ಕೇಂದ್ರದಲ್ಲಿ ಜನ ಸಂಘಟನೆಯ ಕಷ್ಟ ಅಂತಿಂಥದ್ದಲ್ಲ. ತಮ್ಮ ಕೆಲಸ ಕಾರ್ಯಗಳನ್ನು ಬದಿಗಿಟ್ಟು ನಮ್ಮಲ್ಲಿ ತರಬೇತಿಗಾಗಿ ಇವರು ಬರುತ್ತಾರೆಯೆ? ಎನ್ನುವ ನಮ್ಮ ದೈನಂದಿನ ಅನುಭವದಿಂದಾಗಿ ಹದಿಮೂರು ಮಂದಿ ಮಹಿಳೆಯರನ್ನು ನಾವು ಸಂಘಟಿಸಿದ್ದೆವು. ಅವರಲ್ಲಿ ಕನಿಷ್ಠ ಹತ್ತು ಮಂದಿ ಮಹಿಳೆಯರಾದರೂ ಬಂದೇ ಬರುವರು ಎಂಬ ನಮ್ಮ ನಂಬಿಕೆ ಹುಸಿಯಾಗಿತ್ತು. ಕಾರಣವೇನೆಂದರೆ ಹದಿನೇಳು ಮಂದಿ ಮಹಿಳೆಯರು ಕಾರ್ಯಾಗಾರದ ಉದ್ಘಾಟನೆಯ ಸಂದರ್ಭದಲ್ಲಿ ನೋಂದಣಿಗೊಂಡಿದ್ದರು! ಅಲ್ಲೂ ಒಂದು ವಿಶೇಷವಿದೆ. ಈ ಹದಿನೇಳು ಜನ ಮಹಿಳೆಯರಲ್ಲಿ ಬಹುತೇಕ ಮಂದಿ ನಮ್ಮ ಸಮುದಾಯ ಬಾನುಲಿ ಕೇಂದ್ರದಲ್ಲಿ ಒಂದಲ್ಲ ಒಂದು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದವರೇ! ಇದೇನಾಶ್ಚರ್ಯ! ಎಂದು ನಮ್ಮ ಸಿಬ್ಬಂದಿ ಆಶ್ಚರ್ಯ ಪಡುವುದರ ಜೊತೆಗೆ ಸಂತೋಷದ ಪರಮಾವಧಿಯನ್ನು

ತಲುಪಿದ್ದರು. ನಮ್ಮ ಸಮುದಾಯ ಬಾನುಲಿ ಕೇಂದ್ರ ಸುಮಾರು ಹದಿನೈದರಿಂದ ಇಪ್ಪತ್ತು ಕಿಲೋಮೀಟರ್ ಪ್ರಸಾರ ವ್ಯಾಪ್ತಿಯನ್ನು ಹೊಂದಿದ್ದರೂ ಭೌಗೋಳಿಕ ವೈಪರೀತ್ಯದಿಂದಾಗಿ ಸುಮಾರು ನಲ್ವತ್ತೈದು ಕಿಲೋಮೀಟರ್ ವ್ಯಾಪ್ತಿಯಲ್ಲೂ ಕೇಳುಗರನ್ನು ಹೊಂದಿರುವುದು ವಿಶೇಷ ಮತ್ತು ಅಷ್ಟೇ ಸತ್ಯ! ಪ್ರಸಾರವ್ಯಾಪ್ತಿ ಹೀಗಿದ್ದರೆ ರೇಡಿಯೋ ಸಿದ್ದಾರ್ಥದ ಬಗ್ಗೆ ವ್ಯಾಪಕ ಪ್ರಚಾರ ಮಾಡಿದ ಹೆಮ್ಮೆ ನಮಗಿತ್ತು.

ಸಮುದಾಯದ ಮಹಿಳಾ ಪ್ರಸಾರಕಿಯರ ಕಾರ್ಯಾಗಾರದ ಉದ್ಘಾಟನೆಗೆ ಆಕಾಶವಾಣಿ ಹಾಗೂ ಸಮುದಾಯ ಬಾನುಲಿ ಪರಿಣಿತ ಎಂ. ಅಬ್ದುಲ್ ರೆಹಮಾನ್ ಪಾಷ, ಹೆಗ್ಗಡದೇವನ ಕೋಟೆಯಲ್ಲಿನ 'ಜನಧ್ವನಿ' ಸಮುದಾಯ ಬಾನುಲಿ ಕೇಂದ್ರದ ಮಹಿಳಾ ಸಿಬ್ಬಂದಿ ಪೋಷಿಣಿ, ಶ್ರೀ ಸಿದ್ಧಾರ್ಥ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿ ಪ್ರೊ. ಸಿ.ಎನ್ ನರಸಿಂಹ ಮೂರ್ತಿ ಹಾಗೂ ಸುಮಾರು ಎಂಬತ್ತು ಮಂದಿ ಸಮುದಾಯ ಬಾನುಲಿ ಕೇಂದ್ರದ ಅಭಿಮಾನಿಗಳ ಸಮ್ಮುಖದಲ್ಲಿ ಮಹಿಳಾ ಪ್ರಸಾರಕಿಯರ ಕಾರ್ಯಾಗಾರ ಉದ್ಘಾಟನೆಗೊಂಡದ್ದು ವಿಶೇಷವಾಗಿತ್ತು. ಎಂ. ಅಬ್ದುಲ್ ರೆಹಮಾನ್ ಪಾಷ ಹಾಗೂ ಪೋಷಿಣಿ ಮಹಿಳಾ ಪ್ರಸಾರಕಿಯರ ಕಾರ್ಯಾಗಾರಕ್ಕೆ ಹಾಜರಾದ ಹದಿನೇಳು ಮಂದಿಗೆ ಪ್ರತ್ಯೇಕ ತರಗತಿಗಳನ್ನು ನಡೆಸಿ ಸಮುದಾಯ ಬಾನುಲಿ ಕೇಂದ್ರದ ಪರಿಕಲ್ಪನೆ ಹಾಗೂ ಮಹಿಳೆಯರ ಪಾಲ್ಗೊಳ್ಳುವಿಕೆಯ ಕುರಿತಾಗಿ ಉಪನ್ಯಾಸ ನೀಡಿದರು. ನಂತರದ ಎರಡು ದಿನಗಳಲ್ಲಿ ರೇಡಿಯೋ ಕಾರ್ಯಕ್ರಮಗಳ ಉದ್ದೇಶ, ಅದರಲ್ಲಿ ಇರಬೇಕಾದ ಅಂಶ, ಸಂದೇಶ, ಪ್ರಕಾರಗಳು, ಜನತೆಗೆ ತಲುಪಬೇಕಾದ ರೀತಿ-ನೀತಿ ಮಹಿಳಾ ಪ್ರಸಾರಕಿಯರ ಜವಾಬ್ದಾರಿ ಇತ್ಯಾದಿ ವಿಷಯಗಳ ಕುರಿತಾಗಿ ಪ್ರತ್ಯೇಕ ಅವಧಿಗಳಲ್ಲಿ ಉಪನ್ಯಾಸ ನೀಡಲಾಯಿತು. ಈ ಎಲ್ಲಾ ತರಬೇತಿಯನ್ನು ಪಡೆದ ಮಹಿಳಾ ಪ್ರಸಾರಕಿಯರ ಮೂರು ತಂಡಗಳು ಪ್ರತ್ಯೇಕವಾಗಿ ಹದಿನೈದು ನಿಮಿಷದ ಸಮುದಾಯ ಬಾನುಲಿ ಕಾರ್ಯಕ್ರಮಗಳನ್ನು ನೀಡಿದವು. ನಂತರ ಧ್ವನಿ ಸಂಕಲನ ಹಾಗೂ ಪ್ರಸರಣದ ಕುರಿತಾಗಿಯೂ ಪ್ರಾತ್ಯಕ್ಷಿಕೆಯನ್ನು ಕೊಡಲಾಯಿತು. ಅಲ್ಲದೆ ಸಮಯದ ಅಭಾವದಿಂದಾಗಿ ಅವರ ನಿರಂತರ ಭಾಗವಹಿಸುವಿಕೆಯ ಸಂದರ್ಭದಲ್ಲಿ ಧ್ವನಿ ಸಂಕಲನ ಹಾಗೂ ಪ್ರಸರಣದ ಕುರಿತಾಗಿ ಪರಿಪೂರ್ಣ ತರಬೇತಿಯನ್ನು ರೇಡಿಯೋ ಸಿದ್ದಾರ್ಥದ ಸಿಬ್ಬಂದಿವರ್ಗ ನೀಡುವುದೆನ್ನುವ ಭರವಸೆಯೊಂದಿಗೆ ಪುಟ್ಟ ಸಮಾರಂಭವನ್ನು ಏರ್ಪಡಿಸಿ ರೇಡಿಯೋ ಸಿದ್ದಾರ್ಥದ ವ್ಯಾಪಕ ಪ್ರಚಾರಕ್ಕೆ ಕಾರಣರಾದ ಸ್ಥಳೀಯ ಪತ್ರಿಕಾ ಸಂಪಾದಕ ನಾಗಣ್ಣ, ಹಿರಿಯ ಮಹಿಳಾ ಲೇಖಕಿ ಅನ್ನಪೂರ್ಣ ವೆಂಕಟನಂಜಪ್ಪ ಹಾಗೂ ತುಮಕೂರಿನ ಶ್ರೀ ರಾಮಕೃಷ್ಣಾಶ್ರಮದ ಶ್ರೀ ವೀರೇಶಾನಂದ ಸ್ವಾಮೀಜಿಯವರ ಸಮ್ಮುಖದಲ್ಲಿ ಕಾರ್ಯಾಗಾರದ ಕುರಿತಾದ ಅನುಭವ ಹಾಗೂ ಅನಿಸಿಕೆಗಳನ್ನು ಹಂಚಿಕೊಳ್ಳಲು ಅವಕಾಶ ನೀಡಲಾಯಿತು. ಅಲ್ಲದೆ ಕಾರ್ಯಾಗಾರದಲ್ಲಿ ಭಾಗವಹಿಸಿದ ಹದಿನೇಳು ಮಂದಿ ಮಹಿಳೆಯರು ಹಾಗೂ ಮುಖ್ಯ ತರಬೇತುದಾರರಿಗೆ ಸಹಾಯಹಸ್ತ ನೀಡಿದ ಇನ್ನೆರಡು ಮಹಿಳಾ ಪ್ರತಿನಿಧಿಗಳಿಗೆ ಪ್ರಮಾಣ ಪತ್ರ ಹಾಗೂ ಗೌರವಧನ ನೀಡಿ ಬೀಳ್ಕೊಟ್ಟೆವು.

ಕಾರ್ಯಾಗಾರ ಮುಗಿದ ಕೇವಲ ಎರಡು ದಿನಗಳಲ್ಲಿ ತರಬೇತುದಾರರಾಗಿ ನಮ್ಮೊಂದಿಗೆ ಸಹಕರಿಸಿದ ರಿಹಾನ್ ತಾಜ್‌ರನ್ನು ದೂರವಾಣಿ ಮೂಲಕ ಸಂಪರ್ಕಿಸಿದಾಗ ಅಳುವಿನ ದನಿ ಮುಗಿಲು ಮುಟ್ಟಿತ್ತು. ಸಿಬ್ಬಂದಿ ವರ್ಗ ಅದೇನಾದರೂ ನಮ್ಮಿಂದ ತಪ್ಪಾಯಿತೋ ಎಂದು ಕೇಳುವಷ್ಟರಲ್ಲಿ ರಿಹಾನ್ ತಾಜ್ 'ಗಾಬರಿಯಾಗ್ಬೇಡಿ. ಇದು ಆನಂದ ಭಾಷ್ಪದ ದನಿ. ನೀವು ನನ್ಗೆ ರೇಡಿಯೋ ಸಿದ್ದಾರ್ಥದ ಪ್ರತಿಯೊಂದು ಕಾರ್ಯಕ್ರಮಗಳಲ್ಲಿ ಅಲ್ಲದೆ ಈಗ ತರಬೇತಿಯಲ್ಲಿ ಇಷ್ಟೊಂದು ಅವಕಾಶ ನೀಡಿ ಕೊಳೆಗೇರಿಯಲ್ಲಿ ಮೂಲೆಗುಂಪಾಗಿದ್ದ ನನ್ನನ್ನು ಪ್ರೋತ್ಸಾಹಿಸಿದಕ್ಕಾಗಿ ನಾನು ಚಿರಋಣಿ. ಆ ಖುಷಿಯಲ್ಲಿ ನನ್ಗೆ ಊಟ-ತಿಂಡಿ ಯಾವುದೂ ಬೇಡ ಅನಿಸ್ತಿದೆ ಕಣ್ರೀ. . . ಸತ್ಯಾನೇ ಹೇಳ್ತಿದ್ದೀನಿ ಅಲ್ಲಾಹ್ ಕೆ ಖಸಂ ಮೆ. . .' ಎಂದಾಗ ನಮ್ಮ ಸಿಬ್ಬಂದಿಗಂತೂ ಸಂತಸ ಉತ್ತುಂಗಕ್ಕೇರಿತ್ತು.ಅವಕಾಶ ವಂಚಿತ ಜನರನ್ನು ಸಮುದಾಯ ಬಾನುಲಿ ರೇಡಿಯೋ ಸಿದ್ದಾರ್ಥದಲ್ಲಿ ತೊಡಗುವಂತೆ ಮಾಡಬೇಕು ಎನ್ನುವ ಛಲ ನೂರ್ಮಡಿಸಿದ್ದಂತೂ ಪ್ರಾಮಾಣಿಕ ಸತ್ಯ.




ಆ ನಂತರದ ದಿನಗಳಲ್ಲಿ ತರಬೇತಿ ಪಡೆದ ಮಹಿಳೆಯರ ನಿರಂತರ ಭಾಗವಹಿಸುವಿಕೆ ಸಮುದಾಯದ ಮಹಿಳಾ ಪ್ರಸಾರಕಿಯರ ತರಬೇತಿ ಸಾರ್ಥಕತೆಯನ್ನು ಪಡೆಯಿತು ಎನ್ನುವುದಕ್ಕೆ ಸಾಕ್ಷಿಯಾಯಿತು. ಸಾಮಾನ್ಯ ಮಹಿಳೆಯರಿಗೂ ಅವಕಾಶ ಸಿಕ್ಕಿದಲ್ಲಿ ನಮ್ಮ ಸಮುದಾಯ ಅಭಿವೃದ್ಧಿ ಪಥದಲ್ಲಿ ಸಾಗುವುದು ಖಂಡಿತ. ಸಮುದಾಯ ಬಾನುಲಿಗಳಲ್ಲಿ ಇಂಥಾ ತರಬೇತಿ ನಿಜಕ್ಕೂ ಅಗತ್ಯವಿದೆ ಅಲ್ಲವೆ? ಈ ತರಬೇತಿಗೆ ಪ್ರಾಯೋಜಕತ್ವ ನೀಡಿ ಸಹಕರಿಸಿದ ಸೆಮ್ಮಾಗೆ ಧನ್ಯವಾದಗಳು.

ರಶ್ಮಿ ಅಮ್ಮೆಂಬಳ
ಕಾರ್ಯಕ್ರಮ ನಿರ್ವಾಹಕರು
ರೇಡಿಯೋ ಸಿದ್ದಾರ್ಥ, ಸಮುದಾಯ ಬಾನುಲಿ ಕೇಂದ್ರ, ತುಮಕೂರು.

ಎಳೆಯ ಮೈಮನಗಳು ಮುದುಡದಿರಲಿ

■ ರಾಧಾ ಸಿದ್ಧಾಂತಿ



ದೆಹಲಿಯ ಅತ್ಯಾಚಾರ ಪ್ರಕರಣ ನಡೆದ ನಂತರ ನಾನು ಶಾಲಾ ಮಕ್ಕಳಿಗೆ ಲಿಂಗತ್ವ ಪರಿಚಯದ ಕುರಿತು ಜೀವನ ಕೌಶಲ್ಯ ತರಬೇತಿ ನೀಡಲು ಹೋಗಿದ್ದೆ, ಆಗ 5ನೇ ಕ್ಲಾಸಿನ ಹುಡುಗ ನನಗೆ ಕೇಳಿದ ಪ್ರಶ್ನೆ

‘ಮ್ಯಾಮ್ ರೇಪ್ ಅಂದ್ರೆ ಏನು? ನನ್ನ ಅಮ್ಮನ ಬಳಿ ಈ ಪ್ರಶ್ನೆ ಕೇಳಿದಾಗ ಅವಳು ನನಗೆ ಬೈದು ಬಿಟ್ಟಳು’

ನಾನು ತರಬೇತಿ ನೀಡಲು ಹೋದ ಶಾಲೆಯಲ್ಲೆಲ್ಲ ಈ ಒಂದು ಪ್ರಶ್ನೆಯನ್ನು ನನಗೆ ಸದಾ ಕೇಳಲಾಗುತ್ತದೆ. ನಾವು ಜವಾಬ್ದಾರಿಯುತ ವಯಸ್ಕರಾಗಿ ನಮ್ಮ ಮೌನವನ್ನು ಮುರಿದು ಇಂತಹ ವಿಷಯಗಳ ಬಗ್ಗೆ ತೆರೆದ ಮನಸ್ಸಿನಿಂದ ಮಾತನಾಡುವ ಸಮಯ ಬಂದಿದೆ. ಮಕ್ಕಳಿಗೂ ಇಂತಹ ಜ್ಞಾನದ ಮಾಹಿತಿಯ ಅವಶ್ಯಕತೆಯಿದೆ.

ಜವಾಬ್ದಾರಿಯುತ ಪಾಲಕರಾಗಿ ಈ ವಿಷಯದ ಬಗ್ಗೆ ನಾವು ಮಕ್ಕಳೊಂದಿಗೆ ಮಾತನಾಡದಿದ್ದಲ್ಲಿ ಅವರು ತಪ್ಪು ಹಾಗೂ ಸುಳ್ಳು ಮಾಹಿತಿ ಇತರರಿಂದ ಪಡೆಯಬಹುದು.

ಮಕ್ಕಳಲ್ಲಿ ಎಲ್ಲವನ್ನೂ ತಿಳಿದುಕೊಳ್ಳುವ ಕೂತುಹಲದ ಸ್ವಭಾವ ಸರ್ವೆ ಸಾಧಾರಣವಾಗಿರುತ್ತೆ. ಈ ಕುತೂಹಲಗಳಿಗೆ ಸರಿಯಾದ ದಾರಿ ತೋರದಿದ್ದಲ್ಲಿ, ಅತ್ಯಾಚಾರಿಗಳು ಈ ಅವಕಾಶದ ಉಪಯೋಗ ಮಾಡಬಲ್ಲರು ಮತ್ತು ಮಕ್ಕಳು ಅವರಿಗೆ ಬಲಿಯಾಗಬಹುದು. ಇಂತಹುದನ್ನೆಲ್ಲ ತಡೆಗಟ್ಟಲು ಮತ್ತು ನಮ್ಮ ಮಕ್ಕಳ ಬಗ್ಗೆ ಕಾಳಜಿ ಇದ್ದಲ್ಲಿ ಅವರಿಗೆ ನಾವು ಸರಿಯಾದ ಮಾಹಿತಿಗಳನ್ನು ನೀಡಬೇಕು.

ಬಹುತೇಕ ಸಂದರ್ಭದಲ್ಲಿ ಲೈಂಗಿಕ ಕಿರುಕುಳಕ್ಕೆ 5ನೆ ವರ್ಷ ಪ್ರಾಯಕ್ಕೆ ಶುರುವಾಗಿ, ಸಾಧಾರಣ 12–14 ವರ್ಷಕ್ಕೆ ಉತ್ತುಂಗ ಸ್ಥಿತಿಯಲ್ಲಿದ್ದು ಕ್ರಮೇಣ ಕಡಿಮೆಯಾಗುತ್ತ ಹೋಗುತ್ತದೆಂದು ಅಂಕಿ ಅಂಶ (ಸರಕಾರದ ಮಾಹಿತಿ) ಹೇಳುತ್ತದೆ. ಕೆಲವು ಸಂದರ್ಭಗಳಲ್ಲಿ ಅದು ಹೆಚ್ಚು ಕಾಲವೂ ನಡೆಯಬಹುದು. ಹೆಚ್ಚಿನಂಶ ಇಂತಹ ಕಿರುಕುಳ ನೀಡುವವರು ಪರಿವಾರದ ಪರಿಚಯಸ್ಥರೆ ಆಗಿರುತ್ತಾರೆ. ಕುಟುಂಬದ ನಂಬುಗೆಯನ್ನು ಪಡೆಯುವಲ್ಲಿ ಯಶಸ್ವಿಯಾಗುತ್ತಾರೆ. ಈ ಕಿರುಕುಳ ನೀಡುವವರು ಸ್ವಭಾವದಿಂದ ಪುಕ್ಕಲಾಗಿರುತ್ತಾರೆ. ಮೊದಲಿಗೆ ಮಗುವಿನ ಸ್ನೇಹ ಮತ್ತು ವಿಶ್ವಾಸ ಪಡೆಯುತ್ತಾರೆ ಆ ಮೇಲೆ ನಿಧಾನವಾಗಿ ತಮ್ಮ ಬಣ್ಣ ಬಯಲು ಮಾಡುತ್ತಾರೆ. ಇದಕ್ಕೆ 5 ತಿಂಗಳ ಮಗುವಿನಿಂದ 2 ವರ್ಷದ ಮಕ್ಕಳು ಬಲಿಯಾಗುತ್ತಾರೆ.

2 ತಿಂಗಳಿಂದ 5 ವರ್ಷಗಳ ಮಕ್ಕಳ ಬೆಳವಣಿಗೆಗೆ ‘ಪ್ರಾರಂಭಿಕ ಹಂತ’ (grooming process) ಅಂತ ಕರೆಯಬಹುದು– ಈ ಗ್ರೂಮಿಂಗ್ ಹಂತದಲ್ಲೇ ಮಕ್ಕಳಿಗೆ ‘ಒಳ್ಳೆಯ ಸ್ಪರ್ಶ’ ‘ಕೆಟ್ಟ ಸ್ಪರ್ಶದ’ ಬಗ್ಗೆ ತಿಳಿಹೇಳುವ ಜರೂರಿ ಇದೆ

ವೈಯಕ್ತಿಕ ರಕ್ಷಣೆ ಬಗ್ಗೆ ಮಕ್ಕಳಿಗೆ ತಿಳಿ ಹೇಳುವಾಗ ಈ ಕೆಳಗಿನ ಅಂಶಗಳಿಗೆ ಗಮನ ನೀಡಬೇಕು. ದೊಡ್ಡ ಮಕ್ಕಳಿಗೆ ಮಾತ್ರ ಇವನ್ನು ಸೀಮಿತಗೊಳಿಸಬಾರದು ಯಾಕಂದ್ರೆ ಲೈಂಗಿಕ ಕಿರುಕುಳ 5 ವರ್ಷದ ಮಕ್ಕಳು ಕೂಡ ಬಲಿಯಾಗುತ್ತಾರೆ

12,446 ಮಕ್ಕಳಲ್ಲಿ 53% ಮಕ್ಕಳು ತಮ್ಮ ಮೇಲೆ ನಡೆದ ಲೈಂಗಿಕ ಕಿರುಕುಳದ ಬಗ್ಗೆ ಹಂಚಿಕೊಂಡಿದ್ದಾರೆ (ಭಾರತ ಸರಕಾರದ ಸಮೀಕ್ಷೆಯ ಪ್ರಕಾರ) ಮಕ್ಕಳಿಗೆ ಇಂತಹ ವಿಷಯಗಳ ಬಗ್ಗೆ ಅಂದರೆ ವೈಯಕ್ತಿಕ ಸುರಕ್ಷೆ, ಲೈಂಗಿಕ ಬೇಕು ಬೇಡಗಳ ಬಗ್ಗೆ ತಿಳುವಳಿಕೆ ನೀಡುವಲ್ಲಿ ನಮ್ಮ ವಿಫಲತೆಲೈಂಗಿಕ ಕಿರುಕುಳ ನಡೆದಿದ್ದರೆ ಅದರ ಲಕ್ಷಣಗಳು

ನಾವು ಗಮನಿಸಬೇಕಾದ ಅಂಶಗಳು

- ವಯಸ್ಸನ್ನು ಮೀರಿದ ಲೈಂಗಿಕ ಆಸಕ್ತಿ-
- ಜನನಾಂಗ ಪ್ರದೇಶದಲ್ಲಿ ನೋವು ಅಥವಾ ನವೆಯಿಂದ ತುರಿಕೆ, ಜನನಾಂಗದ ಕಾಯಿಲೆ
- ವಿಪರಿತ ವರ್ತನೆ: ತನ್ನನ್ನೆ ಹಾನಿಗೊಳಿಸುವುದು, ಖಿನ್ನತೆ, ಆತ್ಮಹತ್ಯಾ ಮನೋಭಾವ, ಮನೆಯಿಂದ ಓಡಿ ಹೋಗುವುದು ಮುಂತಾದವು
- ವ್ಯಕ್ತಿತ್ವದಲ್ಲಿ ಬದಲಾವಣೆ : ಅಭದ್ರತೆಯ ಭಾವನೆ, ದೊಡ್ಡವರನ್ನು ಅಂಟಿಕೊಂಡೇ ಇರುವುದು
- ತುಂಬ ಚಿಕ್ಕಂದಿನಲ್ಲಿರುವ ಬೆರಳು ಚೀಪುವ, ಹಾಸಿಗೆಯಲ್ಲಿ ಮೂತ್ರಮಾಡುವ ನಡೆವಳಿಕೆಗಳ ಪುನಾರಾವರ್ತನೆ
- ಹಸಿವಾಗದಿರುವಿಕೆ ಅಥವಾ ಅಸ್ವಾಭಾವಿಕ ಹಸಿವು
- ಏಕಾಂತ ಬಯಸುವುದು, ಅನ್ಯಮನಸ್ಕತೆ
- ಆತ್ಮೀಯ ಪರಿಚಯದವರ ಹೆದರಿಕೆ
- ನಿದ್ರಾಹೀನತೆ/ ಕನಸಲ್ಲಿ ಬೆಚ್ಚಿಬೀಳುವುದು
- ಬಟ್ಟೆ ಕಳಚುವುದರಲ್ಲಿ ಹೆದರಿಕೆ/ ಚಿಂತೆ
- ಅಶ್ಲೀಲ ಚಿತ್ರಗಳನ್ನು ಗೀಚುವುದು
- ವಿಪರೀತ ಪ್ರತಿಕ್ರಿಯೆ/ ಪರಿಪೂರ್ಣತೆ ಸಾಧಿಸುವಲ್ಲಿ ವಿಶೇಷ ಪ್ರಯತ್ನ

ಮೇಲ್ನೋಟದ ಈ ಲಕ್ಷಣಗಳಿಂದ ಲೈಂಗಿಕ ಕಿರುಕುಳವೇ ನಡೆದಿರಬೇಕೆಂದೇನಿಲ್ಲ, ಆದರೂ ಪಾಲಕರಿಗೆ ಮಕ್ಕಳಲ್ಲಿ ಏನೋ ಬದಲಾವಣೆಯಾಗಿದೆ ಎನ್ನುವುದನ್ನು ತೋರಿಸಿಕೊಡುವುದಲ್ಲಿ ಮೇಲಿನ ಪಟ್ಟಿ ಸಹಾಯಕರ. ಈ ಕೆಳಗೆ ನೀಡಿದಂತಹ ಯಾವುದೇ ಲಕ್ಷಣ ಮಕ್ಕಳಲ್ಲಿ ಕಂಡರೆ ಪಾಲಕರು ಇದರ ಬಗ್ಗೆ ತುರ್ತು ಗಮನ ಹರಿಸ ಬೇಕು

ನಮ್ಮ ಜಾಗರೂಕತೆಯಲ್ಲಿ ನಾವು ಇರುವುದು ಒಳಿತು. ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಸರ್ವೆಸಾಮಾನ್ಯ ಮತ್ತು ಅದು ಬೆಳಕಿಗೆ ಬರದೆ ಇರುವುದಕ್ಕೆ ಕಾರಣಗಳು: ಹಿರಿಯರನ್ನು ಗೌರಿಸಬೇಕು/ ಹಿರಿಯರು ಯಾವಾಗಲೂ ಸರಿ / ತಾವು ಹೇಳುವುದನ್ನು ಯಾರೂ ನಂಬುವುದಿಲ್ಲ / ಕುಟುಂಬದಲ್ಲಿನ ಕಲಹ ತಡೆಯಲು / ಕಿರುಕುಳ ನೀಡುವವನು ಕುಟುಂಬದ ಪ್ರಭಾವಿ ವ್ಯಕ್ತಿ-ಮುಂತಾದ ತಿಳುವಳಿಕೆಗಳಿಂದ ನಾವು ಮಕ್ಕಳನ್ನು ಬೆಳೆಸುತ್ತೇವೆ.

ಇತ್ತೀಚಿಗೆ ಬೆಳಕಿಗೆ ಬರುವ ಪ್ರಕರಣಗಳು ಬದಲಾಗುತ್ತಿರುವ ಸಮಾಜಕ್ಕೆ ಕನ್ನಡಿ. ಆದರು ಇದು ಸಣ್ಣ ಪ್ರಮಾಣದ ಬದಲಾವಣೆ. ಇನ್ನೂ ದೂರ ಸಾಗಬೇಕಿದೆ. ಈ ತಿಳುವಳಿಕೆ ಪ್ರತಿಯೊಂದು ಮನೆ-ಮನಗಳಲ್ಲೂ ಆಗಬೇಕಿದೆ.

ಪಾಲಕರು ಸಾಮಾನ್ಯವಾಗಿ ಕೇಳುವ ಪ್ರಶ್ನೆ : ಈ ಕಿರುಕುಳ ನೀಡುವವರನ್ನು ಗುರುತಿಸುವುದು ಹೇಗೆ? ಪಾಲಕರಾಗಿ ನಮ್ಮ ಜವಾಬ್ದಾರಿಗಳೇನು? ಮಕ್ಕಳಿಗೆ ನಾವು ಯಾವ ತಿಳುವಳಿಕೆ ನೀಡಬೇಕು?

ಮಕ್ಕಳಿಗೆ :

ನಾಚಿಕೆ ಪಡುವಂತೆ ಮಾಡುವುದು / ಅಪರಾಧಿ ಪ್ರಜ್ಞೆಯಿಂದ ಬಳಲುವಂತೆ ಮಾಡುವುದು

ಆರೋಪಿಸಿವುದು

ಅಲಕ್ಷಿಸುವುದು

ಬೆದರಿಸುವುದು

ಅಪನಂಬಿಕೆ ತೋರ್ಪಡಿಸುವುದು/ ಹೆದರುವಂತೆ ಮಾಡುವುದು

ಲೈಂಗಿಕತೆ ಬಗ್ಗೆ ಅಪೂರ್ಣ ಮಾಹಿತಿ

ಆಯ್ಕೆಯ ಕೊರತೆ

ಪಾಲಕರಿಗೆ:

ಹಿರಿಯರಿಗೆ ಮಾತ್ರ ಗೌರವ ಕಿರಿಯರಿಗೆ ಬೇಡ

ಲೈಂಗಿಕತೆ ಬಗ್ಗೆ ಮಾತಾಡುವುದು ಸಲ್ಲ

ಅದರ ಬಗ್ಗೆ ಸರಿಯಾಗಿ ಮಾತಾಡಲು ಬರಲ್ಲ

ಕೃತ್ಯ ನಡೆಸುವವನು

ಅವನ ದುಷ್ಕೃತ್ಯ ಪತ್ತೆಯಾಗುವುದಿಲ್ಲ

ಗೌರವ ಅನುಭವಿಸುತ್ತಾನೆ

ತುಂಬ ಮಕ್ಕಳ ಮೇಲೆ ದೌರ್ಜನ್ಯ ನಡೆಸುತ್ತಿರುತ್ತಾನೆ

ಮೇಲಿನ ಎಲ್ಲ ಸೂಚಿಗಳೂ ಮುಖ್ಯವಾಗುತ್ತವೆ

ಮೇಲಿನ ಎಲ್ಲ ಸೂಚಿಗಳಲ್ಲಿ ಬದಲಾವಣೆ ಅಗತ್ಯ- ಮೌನವನ್ನು ಮುರಿಯಬೇಕಾಗಿದೆ

ಪ್ರಸ್ತುತ ಚಿತ್ರಣ : 1-2 ವರ್ಷ ವಯೋಮಾನದ ಮಕ್ಕಳಿಗೆ

- ನಮ್ಮ ಲೈಂಗಿಕ ಅಂಗವನ್ನು ಅದರ ಹೆಸರು ಹೇಳದೆ ಅದನ್ನು ಸಂಬೋಧಿಸುವುದು
- ದೊಡ್ಡವರು ಇದರ ಬಗ್ಗೆ ಮಾತಾಡಲ್ಲ ಆದುದರಿಂದ ನಾವು ಮಾತನಾಡಿದರದು ತಪ್ಪು
- ಕೆಟ್ಟಪದ/ಅಶಿಷ್ಟ ಪದಗಳನ್ನು (slang) ಇತರರಿಂದ ಕಲಿಯುವುದು

ಮಕ್ಕಳ ಬಳಿ ಸೂಕ್ತ ಪದಗಳ ಬಳಕೆ

- 1-2 ವರ್ಷ ಮಕ್ಕಳ ಬಳಿ ಸರಿಯಾದ ಪದಗಳನ್ನು ಮಾತಾಡಿ
- ದೈಹಿಕ ಅಂಗಗಳನ್ನು ಹೆಸರಿಸಿ
- ದೇಹದ ಯಾವುದೇ ಭಾಗದಲ್ಲಿ ನೋವಾದಲ್ಲಿ ಹೇಳಿಕೊಳ್ಳುವಂತೆ ಅನುಮೋದಿಸಿ

ಪ್ರಸ್ತುತ ಚಿತ್ರಣ	ಮಕ್ಕಳಿಗೆ ಶಿಷ್ಟಾಚಾರ ಕಲಿಸಿ
• ಗುಂಪಿನಲ್ಲಿ ನಗ್ನಳಾಗಿ ಬಂದಾಗ ಮಗುವನ್ನು ನಾಚಿಕೆ ಪಡುವಂತೆ ಮಾಡುವುದು	• ಈ ಭಾಗವನ್ನು ನಾವು ಮುಚ್ಚಿಕೊಂಡಿರಬೇಕೆಂದು ಹೇಳಬೇಕು
• ತಮ್ಮ ಜನನಾಂಗ ಮುಟ್ಟಿಕೊಂಡರೆ ಅವರನ್ನು ಕೆಟ್ಟ ಹುಡುಗ/ಹುಡುಗಿ ಅಂತ ವರ್ಗೀಕರಿಸುವುದು	• ಗುಪ್ತ ಜನನಾಂಗವನ್ನು ನಾವು ಬಹಿರಂಗವಾಗಿ ಮುಟ್ಟಬಾರದು

ಪ್ರಸ್ತುತ ಚಿತ್ರಣ : ನಮ್ಮ ದೇಹವೆಂದರೆ	ಮಕ್ಕಳಿಗೆ ತಿಳುವಳಿಕೆ/ ಕಿವಿಮಾತು
ನಾಚಿಕೆಪಡುವಂಥದ್ದು	ದೇಹದ ಮೇಲೆ ಗೌರವ
ಗಲೀಜು	ಶುಚಿತ್ವ
ಕೆಟ್ಟದ್ದು	ದೈಹಿಕ ಸುರಕ್ಷೆ
	ನಮ್ಮ ದೇಹ ಸ್ವಾಭಾವಿಕವಾಗಿ ನಾವು ಪಡಕೊಂಡಿದ್ದು
	ಅದರಿಂದ ಜೀವದ ಉತ್ಪತ್ತಿ

'ಹೆಮ್ಮೆ' ಮತ್ತು 'ನಾಚಿಕೆ'

ಪ್ರಸ್ತುತ ಚಿತ್ರಣ :	ಮಕ್ಕಳಿಗೆ ತಿಳುವಳಿಕೆ/ ಕಿವಿಮಾತು
ನಮ್ಮ ದೇಹದ ಬಾಹ್ಯ ಸೌದರ್ಯಕ್ಕೆ ಹೆಚ್ಚಿನ ಒತ್ತು	ನಮ್ಮ ದೇಹದ ದೇಕಿರೇಖಿಯಲ್ಲಿ ಹೆಮ್ಮೆ
ಬಾಹ್ಯ ಸೌಂದರ್ಯವನ್ನು ಹೆಚ್ಚಿಸುವ ಜಾಹಿರಾತು	ದೇಹವನ್ನು ಸ್ವಚ್ಛವಾಗಿಡಿ
ಸೌಂದರ್ಯ ಇಲ್ಲದಿದ್ದರೆ ಅವನು/ಅವಳು ನಾಚಿಕೆ ಪಡಬೇಕು	ನಿಮ್ಮ ಗುಣ ಮುಖ್ಯ ಬಾಹ್ಯ ಸೌಂದರ್ಯಕ್ಕಿಂತ

ವೈಯಕ್ತಿಕ ಸುರಕ್ಷೆ ಬಗ್ಗೆ ಪಾಠ

ಪ್ರಸ್ತುತ ಚಿತ್ರಣ	ಮಕ್ಕಳಿಗೆ ತಿಳುವಳಿಕೆ/ ಕಿವಿಮಾತು
ವೈಯಕ್ತಿತ ಸುರಕ್ಷೆ ಬಗ್ಗೆ ಮಾತಿಲ್ಲ	ನಿಮ್ಮ ಸುರಕ್ಷೆ ಮುಖ್ಯ, ಬೇಡ ಅನ್ನುವ ಹಕ್ಕು ನಿಮಗಿದೆ
ಯಾರಿಗೂ 'ಬೇಡ/ಇಲ್ಲ' ಅನ್ನಕೂಡದು	ಜನನೇಂದ್ರಿಯಗಳನ್ನು ಮುಟ್ಟುವುದು ಸರಿಯಲ್ಲ
ಬೇರೆಯವರ ಬೇಕುಬೇಡಗಳು ಅತೀ ಮುಖ್ಯ	ತೊಂದರೆ/ಕಿರುಕುಳ ನೀಡುವ ಜನರಿಂದ ದೂರವಿರಿ
ಅಪರಿಚಿತರಿಂದ ಯಾವಾಗಲೂ ನಂಬಲೇಬಾರದು	ಗೌರವ ನೀಡಬೇಕೆನ್ನಿಸಿದವರನ್ನು ಗೌರವಿಸಿ
ಹಿರಿಯರನ್ನು ಗೌರವಿಸು	

ನಂಬುಗೆ- ಗುಣ ಪಡಿಸುವಿಕೆ

ಪ್ರಸ್ತುತ ಚಿತ್ರಣ : ಲೈಂಗಿಕ ಕಿರುಕುಳದ ಬಗ್ಗೆ ವರದಿ ಮಾಡುವ ಮಕ್ಕಳನ್ನು	ಮಕ್ಕಳಿಗೆ ತಿಳುವಳಿಕೆ/ ಕಿವಿಮಾತು
ನಾಚುವಂತೆ ಮಾಡುವುದು	ಕುಕೃತ್ಯ ಮಾಡಿದವರ ಬಗ್ಗೆ ವರದಿ ಮಾಡುವುದು
'ನೀನೇ ಕಾರಣ' ಎನ್ನುವುದು	ತನ್ನ ಮೇಲೆ ನಂಬುಗೆ
	ಮಕ್ಕಳ ಹೇಳಿಕೆಯನ್ನು ಗಣನೆಗೆ ತನ್ನಿ
ಕಡೆಗಣಿಸುವುದು	ಅಪರಾಧಿಯನ್ನು ಶಿಕ್ಷಿಸಿ ಮಗುವಿನ ಗುಣಪಡಿಸುವಲ್ಲಿ ಗಮನ ನೀಡಿ
ಸುಮ್ಮನಿರಿಸುವುದು	ಮಾತುಗಳನ್ನು ಎಲ್ಲರೊಂದಿಗೂ ಹಂಚಿಕೊಳ್ಳಿ
	ಎಲ್ಲ ಮಕ್ಕಳ ಆಶಯ ಎರಡು

1. ನೀವು ಅವರನ್ನು ನಂಬಬೇಕು
2. ಇಂತಹ ದುರಾಚರ ನಿಲ್ಲಬೇಕು

ನಾವು ಹಿರಿಯರು/ಪಾಲಕರು ನಮ್ಮ ಮಕ್ಕಳ ಶ್ರೇಯೋಭಿವೃದ್ಧಿ ಬಯಸುವುದಾದರೆ, ನಮ್ಮ ಮೌನವನ್ನು ಮುರಿದು ಎಲ್ಲರೊಂದಿಗೆ ಈ ವಿಷಯವನ್ನು ಮುಕ್ತತೆಯಿಂದ ಚರ್ಚಿಸಬೇಕು. ನಮ್ಮ ಮಕ್ಕಳಿಗೆ ನಾವೇ ಕಲಶಪ್ರಾಯರಾಗಬೇಕು.



ನನ್ನ ನಾ ಹುಡುಕುತ್ತ

ಮೂಲ ಮರಾಠಿ "ಸ್ವತಃಚಾ ಶೋಧಾತ್": ಛಾಯಾ ದಾತಾರ್

ಕನ್ನಡಕ್ಕೆ : ಶೀತಲಾ ಭಟ್

ಉರಿಯುವ ಸೂರ್ಯನ ತಾಪ ಇಳಿಯುತ್ತಿದ್ದಂತಿತ್ತು. ಹಗಲೆಲ್ಲ ಆರ್ಭಟಿಸುತ್ತಿದ್ದ ಗಾಳಿಯ ಆವೇಗವೂ ಕಡಿಮೆಯಾದಂತಿತ್ತು. ಮೈಗೆ ಬಡಿಯುತ್ತಿದ್ದ ಧೂಳು ಕೂಡ ವಿಶ್ರಾಂತಿ ತೆಗೆದುಕೊಳ್ಳುತ್ತಿತ್ತು ತಾಪಿ ನದಿಯಲ್ಲಿ ನಿಂತಿದ್ದ ನನ್ನ ಕಾಲುಗಳನ್ನು ಮುದ್ದಿಸುತ್ತ ಅಲೆಗಳು ಮುಂದೆ ಹರಿಯುತ್ತಿದ್ದವು. ನನ್ನ ದೇಹ ಬಿಸಿಯ ಅಲೆಗಳನ್ನು ಇನ್ನೂ ಅನುಭವಿಸುತ್ತಿದ್ದಂತೆನ್ನಿಸಿತು. ಆದರದು ಹೊರಗಿನ ಅಲೆಗಳಲ್ಲ. ಒಳಗಿನಿಂದ ಎದ್ದೆದ್ದು ಬರುತ್ತಿರುವ ತಾಪದ ಅಲೆಗಳು.

ತಾಪಿಯ ತಂಪು ನಿಧಾನಕ್ಕೆ ನನ್ನ ಮನದೊಳಕ್ಕೆ ಹೊಕ್ಕುತ್ತಾ ಇತ್ತು. ಸೂರ್ಯ ಪಶ್ಚಿಮದ ಧೂಳಿನಲ್ಲಿ ಮಿಂದಂತೆ ನಿಂತಿದ್ದ. ಒಂಟಿಯಾಗಿ ತಾಪಿ ನದಿಯಲ್ಲಿ ನಿಂತಿದ್ದ ನಾನು ಎಲ್ಲ ಸಾಮಾಜಿಕ ಬಂಧನಗಳನ್ನು ಕಳಚಿಕೊಂಡಂತಿದ್ದೆ.

ದೂರದಲ್ಲಿ ದುಡಿಯ ಶಬ್ದ ಏರುತ್ತಲೇ ಇತ್ತು. ನನ್ನೊಳಗಿನ ವಿಚಿತ್ರವಾದ, ಆದರೂ ಮಧುರವಾದ ದುಃಖ ಏರುತ್ತಲೇ ಇತ್ತು. ಮಧುರವಾದ ದುಃಖ. ಹೌದು.. ಪಟ್ಟಣದಲ್ಲಿ ಅನುಭವಿಸಲಾಗದ್ದು. ಆ ಗದ್ದಲದಲ್ಲಿ, ಆ ಮಿಂಚಿನ ಬೆಳಕಿನಲ್ಲಿ ಕಾಣದೇ ಹೋದದ್ದು. ಇವತ್ತು ಬೆಳಿಗ್ಗೆ ನನ್ನ ಗಂಡನಿಂದ ಪತ್ರ ಬಂತು. ಆ ಪತ್ರ ನನ್ನ ಭಯವನ್ನು ನಿಜಗೊಳಿಸಿತು. ನನ್ನ ಪ್ರವಾಸವನ್ನು ಮಧ್ಯದಲ್ಲೇ ನಿಲ್ಲಿಸಿ ಹೋಗಬೇಕಾಗಬಹುದೆಂಬ ಭಯ. ಗಂಡನ ಅಕ್ಕನ ಮಗ ಮನೆಯಲ್ಲಿ ಯಾವುದೋ ಪೂಜೆ ಮಾಡಿಸಲಿದ್ದರು. ನನ್ನ ಅತ್ತೆಯೂ ಹಳ್ಳಿಯಿಂದ ಬರುವವರಿದ್ದರು. ನನ್ನ ಉಪಸ್ಥಿತಿ ಅವಶ್ಯವಿತ್ತಂತೆ. ಹೀಗಾಗಿ ನನ್ನ ತಿರುಗಾಟವನ್ನು ಅರ್ಧಕ್ಕೇ ನಿಲ್ಲಿಸಿ ವಾಪಾಸ್ಸು ಬರುವಂತೆ ಆಜ್ಞೆ ಬಂದಿತ್ತು. ಜಗತ್ತಿನ ಇಂತಹ ಭಾಗದಲ್ಲಿ ಓಡಾಡುತ್ತಾ ನನ್ನ ಮನೆ, ಕುಟುಂಬವನ್ನು ಸಂಪೂರ್ಣ ಮರೆತುಬಿಟ್ಟಿದ್ದೆ. ಆಕಾಶದಲ್ಲಿ ಹಾರುತ್ತಿರುವ ಗಾಳಿಪಟದ ಜಂಬದ ಸ್ವಾತಂತ್ರ್ಯವನ್ನು ಅನುಭವಿಸುತ್ತಿದ್ದೆ. ಆದರೆ ಈ ಪತ್ರ ನನ್ನನ್ನು ನೆಲಕ್ಕೆ ಮರಳುವಂತೆ ಮಾಡಿತ್ತು. ಏನು ಮಾಡಬೇಕೆಂಬುದೇ ತಿಳಿಯುತ್ತಿರಲಿಲ್ಲ. ನನ್ನ ಅತ್ತೆ ಬಲು ಘಾಟಿ ಹೆಂಗಸು. ಪತ್ರದಲ್ಲಿ ತಿಳಿಸಿದಂತೆ ನಡೆಯದಿದ್ದರೆ ಗಂಡ ಕೋಪಗೊಳ್ಳುವುದಂತೂ ಖಚಿತ. ಅದರೆ ನನಗೆ ಈ ಜಿಲ್ಲೆಯ ಪ್ರಯಾಣ ಮಾಡಬೇಕೆಂಬ ಆಸೆ. ಆದಿವಾಸಿ ಜನರು ಯೂನಿಯನ್‌ಗಳಲ್ಲಿ ಸಂಘಟಿತರಾಗಿರುವ ಕುರಿತು ತಿಳಿದು ಬರೆಯಬೇಕೆಂದು ದೂರದ ಈ ಜಿಲ್ಲೆಗೆ ಬಂದಿದ್ದೆ. ಅವಿದ್ಯಾವಂತರಾದ, ಅಜ್ಞಾನಿಗಳಾದ ಆದಿವಾಸಿಗಳನ್ನು ಹೋರಾಡಲು ಪ್ರೇರೇಪಿಸುತ್ತಿರುವ ಶಕ್ತಿಯ ಬಗ್ಗೆ ತಿಳಿಯಬೇಕಿತ್ತು.

ಕ್ಯಾಂಪ್ ಕಡೆ ಕತ್ತಲ ದಾರಿಯಲ್ಲಿ ನಡೆದೆ. ನಾನು ತಲುಪುವ ಹೊತ್ತಿಗೆ ಸಂಗೀತ ಜೋರಾಗಿತ್ತು. ಮಧ್ಯಾಹ್ನದ ತರಗತಿಗಳಲ್ಲಿ ಸುಸ್ತಾಗಿದ್ದ ಹೆಂಗಸರೀಗ ತಮ್ಮ ಸೀರೆಗಳನ್ನೆತ್ತಿ ಸೊಂಟಕ್ಕೆ ಸಿಕ್ಕಿಸಿ ಐದಾರು ಜನರ ಗುಂಪುಗಳಲ್ಲಿ ನರ್ತಿಸತೊಡಗಿದ್ದರು. ದೇಹ ಹಿಂದೆ ಮುಂದೆ ತೊನೆಯುತ್ತಾ ಕಾಲುಗಳು ತೀರ ಸಹಜವಾಗಿ ದುಡಿಯ ಸದ್ದಿಗೆ ಹೆಜ್ಜೆ ಹಾಕುತ್ತಿದ್ದವು. ಯಾರೋ ನನ್ನನ್ನು ವೃತ್ತದೊಳಗೆ ಎಳೆದರು. ನಾನೂ ಅವರೊಂದಿಗೆ ನರ್ತಿಸತೊಡಗಿದೆ. ತೀರ ಸುಸ್ತಾದಂತೆನಿಸುತ್ತಿತ್ತು. ಕೊಳಲ ದನಿ ನನ್ನನ್ನು ವಿಹ್ವಲಳನ್ನಾಗಿಸುತ್ತಿತ್ತು. ನೋವನ್ನು ಎಳೆ ಎಳೆಯಾಗಿ ಬಿಡಿಸಿ ತೋರಿಸಿದಂತೆ. ಆದರೂ ನರ್ತಿಸುತ್ತಲೇ ಇದ್ದೆ... ನಶೆ ಏರುತ್ತಿರುವಂತೆ...

ನಾಲ್ಕು ದಿನಗಳಿಂದ ಈ ಜಿಲ್ಲೆಯಲ್ಲಿ ಪ್ರಯಾಣ ಮಾಡುತ್ತಿದ್ದೆ, ಮೊದಲ ದಿನ ನಾಂದರ್‌ಬಾರ್‌ಗೆ ಬಂದು ಅಲ್ಲಿಂದ ಸಂಜೆ ಧುಲ್‌ವಾಡ್ ರೈಲು ಹತ್ತಿದೆ. ಅಲ್ಲಿಗೆ ಬರುವಾಗ ಸಂಪೂರ್ಣ ಕತ್ತಲಾಗಿತ್ತು. ಅದ್ಧಿ, ಧುಲ್‌ವಾಡ್‌ದಿಂದ ಎರಡು ಮೈಲಿ ದೂರದಲ್ಲಿದೆ. ಅಲ್ಲಿಂದಲೇ ನನ್ನ ಪ್ರವಾಸ ಶುರುವಾಗಬೇಕಿತ್ತು ವಿದ್ಯುತ್ ಬೆಳಕಿನಿಂದ ವಂಚಿತವಾಗಿರುವ ಬೀದಿಗಳು ಕತ್ತಲೆಯಿಂದ ತುಂಬಿತ್ತು. ಆಕಾಶದಲ್ಲಿ ನಕ್ಷತ್ರಗಳು ಮಿನುಗುತ್ತಿದ್ದವು. ಧುತ್ ಎನ್ನುವ ಕತ್ತಲೆ ಎಲ್ಲವನ್ನು ತನ್ನ ತೆಕ್ಕೆಯೊಳಗೆ ಮುಚ್ಚಿಕೊಂಡಿರುವಾಗ ಮಾತೂ ಕೂಡ ಬೇಡವಾಗಿತ್ತು. ನಿಸರ್ಗದೊಂದಿಗೆ ಇಂತಹದೊಂದು ಆಪ್ತತೆ ನನಗೆ ತೀರ ಅಪರೂಪ.

ಅವರು ಚಿಮಿಣಿ ಬೆಳಕಿನಲ್ಲಿ ರೋಟಿ ಮತ್ತು ದಾಲ್ ತಿನ್ನುತ್ತ ಕುಳಿತಿದ್ದರು. ಗುಡಿಸಲುಗಳ ಗೋಡೆಯ ಮೇಲೆ ಸಗಣಿಯ ಬೆರಣಿಗಳನ್ನು ತಟ್ಟಿದ್ದರು. ಪಾತ್ರೆಗಳೆಲ್ಲ ಮಣ್ಣಿನಿಂದ ಮಾಡಲ್ಪಟ್ಟಿದವು. ನಮಗೆ ಮಾತ್ರ ತಟ್ಟೆಗಳಲ್ಲಿ ಊಟ ಹಾಕಿದರು. ಅದಷ್ಟೇ ಅವರ ಮನೆಯಲ್ಲಿ ನೋಡಲಿಕ್ಕೆ ಸಿಗಬಹುದಾದ ಲೋಹವಾಗಿತ್ತು.

ರಾತ್ರಿ ನನ್ನ ಜೊತೆಗೆ ಬಂದಿದ್ದ ಕಾರ್ಯಕರ್ತೆ ಎಲ್ಲ ಮಹಿಳೆಯರನ್ನೂ ಕರೆದಳು. ಸೆರಗಿನ ಹಿಂದೆ ಎದೆಗೆ ಅಂಟಿಕೊಂಡಿದ್ದ ಮಗುವಿನೊಂದಿಗೆ ಒಬ್ಬೊಬ್ಬರಾಗಿ ಹಾಜರಾದರು. ಯಾರೋ ಒಬ್ಬಾಕೆ ಲಾಟೀನು ತಂದಳು. ಅದರ ಬೆಳಕು ಕುಳಿತಿದ್ದ ಹೆಂಗಸರ ಮುಖಗಳ ಮೇಲೆ ಬೆಳಕು ಚೆಲ್ಲಲು ವಿಫಲ ಪ್ರಯತ್ನ ನಡೆಸುತ್ತಿತ್ತು. ಅವರೆಲ್ಲರನ್ನು ಅಲ್ಲಿಗೆ ಕರೆತಂದಿರುವುದಾದರೂ ಯಾವುದು? ಕುತೂಹಲವೋ?, ವಿಧೇಯತೆಯೋ? ನನಗೆ ಅರ್ಥವಾಗುತ್ತಿರಲಿಲ್ಲ. ಇರಾನಿ ಟೀ ಕುಡಿಯುತ್ತ ನನ್ನ ಸ್ನೇಹಿತನೊಬ್ಬ ನಾನಿಲ್ಲಿ ಹೊರಡುವ ಮುಂಚೆ ಹೇಳಿದ್ದು ನೆನಪಾಗುತ್ತಿತ್ತು. "ನೀನು ನಿನ್ನ ಪ್ರವಾಸದ ಬಗ್ಗೆ ಇಷ್ಟೊಂದು ಪುಳಕಗೊಳ್ಳುವ ಅವಶ್ಯಕತೆಯಿಲ್ಲ. ಇದೆಲ್ಲವೂ ರಾಜಕೀಯ.. ಒಂದಿಷ್ಟು ಜನ ರಾಜಕೀಯ ಶಕ್ತಿ ಪಡೆಯಲು ಹಣವನ್ನು ಉಪಯೋಗಿಸಿ ಕೊಂಡರೆ ಇನ್ನೊಂದಿಷ್ಟು ಜನ ಕುರಿಗಳನ್ನು ಉಪಯೋಗಿಸುತ್ತಾರೆ ಅಷ್ಟೆ. ಹೆಚ್ಚಿನ ವ್ಯತ್ಯಾಸವೇನೂ ಆಗಲಾರದು" "ಆದರೆ ರಾಜೇಶ್" ನಾನು ವಿರೋಧಿಸಿದ್ದೆ "ಸಮಸ್ಯೆ ಇರುವುದು ಮುಗ್ಧರನ್ನು ಕುರಿಗಳು ಎಂದು ತಿಳಿಯುವುದರಲ್ಲಿ. ತಮ್ಮನ್ನು ಕುರಿಗಳಂತೆ ಬಿಂಬಿಸಿಕೊಂಡು ಲಾಭ ಗಿಟ್ಟಿಸಿಕೊಳ್ಳುವ ಜನರಿದ್ದಾರೆ. ಆದರೆ ನಾನು ಅಧ್ಯಯನ ಮಾಡಲು ಹೋಗುತ್ತಿರುವಲ್ಲಿರುವುದು ಅಂಥವರಲ್ಲ." ಆತ ಕಿರುಚಿದ "ನಾನ್ಸೆನ್ಸ್.. ಕುರಿಗಳ ಹಿಂಡಿನ ಮನಶ್ಶಾಸ್ತ್ರ ಅಧ್ಯಯನ ಮಾಡುವುದಷ್ಟೇ ಇಂದಿನ ಹೋರಾಟದ ಹಿಂದಿನ ಉದ್ದೇಶ. ಇದು ಘೋಷಣೆ, ರಾಜಕೀಯದ ದಿನಗಳು. ವ್ಯಕ್ತಿಯ ಅನನ್ಯತೆಯನ್ನು ನಾಶ ಪಡಿಸುವ ಹುನ್ನಾರ."

ನನಗೆ ನನ್ನೆದುರು ನೆರೆದಿರುವ ಹೆಂಗಸರು ಏನನ್ನು ಯೋಚಿಸುತ್ತಿದ್ದಾರೆಂಬ ಯಾವ ಸುಳಿವೂ ಸಿಗಲಿಲ್ಲ. ಅವರೆಲ್ಲ ಕುರಿಗಳೇ? ಅದು ಕುರಿಗಳ ಮಂದೆಯೇ? ನಾನು ಪಟ್ಟಣದಿಂದ ಬಂದ ಅತಿಥಿಯಾಗಿ ಕೆಲ ಮಾತುಗಳನ್ನಾಡಬೇಕಿತ್ತು. ನಾನು ಮರಾಠಿಯಲ್ಲಿ ಮಾತನಾಡಿದೆ. ನನ್ನ ಜೊತೆಗಾರ್ತಿ ಅರ್ಧ ಮರಾಠಿ ಅರ್ಧ ಸ್ಥಳೀಯ ಭಾಷೆಯಲ್ಲಿ ಮಾತನಾಡಿದಳು. ಒಬ್ಬಾಕೆ ಪ್ರಶ್ನೆ ಕೇಳಿದಳು. ಅದಕ್ಕೆ ಈಕೆ ಘೋಷಣೆಯೊಂದಿಗೆ ಉತ್ತರ ನೀಡಿದಳು.. ಎಲ್ಲರೂ ಮುಷ್ಠಿಗಳನ್ನು ಎತ್ತಿ ಕೂಗುತ್ತಾ ಜೊತೆ ನೀಡಿದರು. ನನಗೆ ಏನೋ ಕಟಕಿದಂತಾಯಿತು.

ಬೆಳಿಗ್ಗೆ ನನ್ನ ಜೊತೆಗಾರ್ತಿ ನನ್ನನ್ನು ಹಳ್ಳಿಯ ತುದಿಗೆ ಕರೆದುಕೊಂಡು ಹೋದಳು. ದಿಗಂತದಾಚೆಗೂ ಚಾಚಿಕೊಂಡಿರುವ ಹೊಲ ನನ್ನ ಕಣ್ಣಳತೆಗೆ ಸಿಗದುದದಾಗಿತ್ತು. ಉದ್ದಕ್ಕೂ ಚಾಚಿದ್ದ ಕಪ್ಪು ಸೀರೆಯಂತ ಮಣ್ಣಿನಲ್ಲಿ ಅಲ್ಲಲ್ಲಿ ಪೊದೆಗಳಿದ್ದವು. ಅಂಚಿನಲ್ಲಿ ಸೂರ್ಯನ ಚೆಂಡು ಅಂದಿನ ದಿನವನ್ನು ಬೆಳಗಲು ಸಿದ್ದತೆ ನಡೆಸುತಿತ್ತು. ನಾನು ಆ ವಿಶಾಲತೆಯಲ್ಲಿ ಕಳೆದು ಹೋಗುತ್ತಿದ್ದೆ. ಕೆಲಸಗಾರರು ವಿಶ್ರಾಂತಿಯಿಲ್ಲದೇ ಓಡಾಡುತ್ತಿದ್ದರು. ಕಾರ್ಯನಿರತ ಇರುವೆಗಳಂತೆ. ಮಧ್ಯದಲ್ಲೇ ಒಡೆಯ ಅವನ ಕಲ್ಲಿನ ಮನೆಯಲ್ಲಿ ಕೂತು ಆದೇಶ ನೀಡುತ್ತಿದ್ದ, ರಾಣಿ ಇರುವೆಯಂತೆ.

ಮಧ್ಯಾಹ್ನದ ಹೊತ್ತು.. ಎಲ್ಲರೂ ಕೈಕಟ್ಟಿ ಕುಳಿತಿದ್ದರು.

"ಅವರೇಕೆ ಕೆಲಸ ಮಾಡುತ್ತಿಲ್ಲ"

"ಮಾಡಲು ಏನೂ ಕೆಲಸವಿಲ್ಲ"

"ಸರ್ಕಾರಿ ಉದ್ಯೋಗ ಯೋಜನೆಗಳಿಲ್ಲವೇ?

"ಹೋದ ತಿಂಗಳು ಸಂಬಳವೇ ಸಿಗಲಿಲ್ಲ"

"ಎಷ್ಟು ದಿನದ ಸಂಬಳ"

ಹದಿನಾರು.

ಹದಿನಾಲ್ಕು.

ಹತ್ತು.

"ಯಾವ ಕೆಲಸವಾಗಿತ್ತು?"

"ರಸ್ತೆ ಕಾಮಗಾರಿ"

"ದಿನಗೂಲಿ ಎಷ್ಟು?"

5 ರೂಪಾಯಿ

"ಪರವಾಗಿಲ್ಲ"

ಆದರೆ ಅವರಿಗೆ ಸಿಗುತ್ತಿದ್ದದ್ದು 2½ ಮಾತ್ರ.

"ಯಾಕೆ"

" ಒಂದು ಹೊತ್ತಿನ ಕೆಲಸಕ್ಕೆ ಅಷ್ಟೆ"

"ಅಂದರೆ ಎಷ್ಟು ತಾಸಿನ ಕೆಲಸ?"

"ಆರು"

"ಬಿಸಿಲಿನಲ್ಲಿ ಅದಕ್ಕಿಂತ ಹೆಚ್ಚು ದುಡಿಯುವುದು ಅಸಾಧ್ಯ"

"ಎಷ್ಟು ಹೊತ್ತಿಗೆ ಕೆಲಸ ಶುರುವಾಗುತ್ತಿತ್ತು?'

"ಬೆಳಿಗ್ಗೆ 7ಕ್ಕೆ.. ಮಧ್ಯಾಹ್ನ ಒಂದರ ತನಕ ಮುಂದುವರೆಯುತ್ತಿತ್ತು"

"ಹೆಂಗಸರೂ ಇಲ್ಲೇ ಕೆಲಸ ಮಾಡುತ್ತಿದ್ದರೆ?"

"ಮನೆಯಲ್ಲೇ ಕೂತರೆ ಹೊಟ್ಟೆ ತುಂಬುವುದು ಹೇಗೆ?"

"ಅಡಿಗೆ ಕೆಲಸ?"

ಕೆಲಸದಿಂದ ವಾಪಸ್ಸವಾಗುವಾಗ ಎರಡು ಮೈಲಿ ದೂರವಿರುವ ಹಳ್ಳಿಗೆ ಹೋಗುತ್ತಾರೆ. ಅಲ್ಲಿಂದ ಹಿಟ್ಟು ಮಾಡಿಸಿಕೊಂಡು ಬಂದು ಭಕ್ಕರಿ* ಮಾಡುತ್ತಾರೆ."

"ಹಿಟ್ಟು ಮಾಡಿಸಲು 2 ಕಿ.ಮೀ ನಡೆಯುವುದೇ?"

"ಏನು ಮಾಡಲಾಗುತ್ತದೆ?. ಇಲ್ಲಿ ಯಾವುದೇ ಮಿಲ್ ಇಲ್ಲ."

ಅಷ್ಟು ತಡವಾಗಿ ಮಧ್ಯಾಹ್ನದ ಊಟ ಮಾಡಿದವರು, ರಾತ್ರೆ ಎಷ್ಟು ಹೊತ್ತಿಗೆ ಉಣ್ಣುತ್ತಾರೆ?"

"ಎರಡು ಹೊತ್ತು ತಿನ್ನುವ ಶೋಕಿಯೇಕೆ? ಒಂದು ಹೊತ್ತು ಸಾಕಾಗುತ್ತದೆ"

"ಈಗ ಕೆಲಸ ನಿಂತು ಹೋಗಿದೆಯಲ್ಲ?"

"ಸ್ವಲ್ಪ ದಿನ ಕಾಳುಗಳನ್ನು ಕಡ ಪಡೆದು ತರುತ್ತಿದ್ದರು. ಆದರೆ ಈಗ ಅಂಗಡಿಯವನು ಕಡ ಕೊಡುವುದನ್ನು ನಿಲ್ಲಿಸಿದ್ದಾನಂತೆ. ಹೀಗಾಗಿ ಮಕ್ಕಳನ್ನು ಒಡೆಯರ ಹೊಲದಲ್ಲಿ ಬೆಳೆಯುವ ಸೊಪ್ಪು ತರಲು ಕಳಿಸುತ್ತಾರೆ. ಅವು ತಂದಾಗ ಅಡಿಗೆಯಾಗುತ್ತದೆ."

"ಮತ್ತೆ ಕಟ್ಟಿಗೆ?"

"ಕಾಡಿನಿಂದ ತರುತ್ತಾರೆ. ಒಮ್ಮೊಮ್ಮೆ ಅರಣ್ಯ ಅಧಿಕಾರಿಯ ಬಳಿ ಸಿಕ್ಕಿ ಹಾಕಿಕೊಂಡು ಜೈಲಿಗೂ ಹೋಗಿದ್ದಾರೆ. ಒಮ್ಮೊಮ್ಮೆ ಆ ಅಧಿಕಾರಿ ಆ ಕಟ್ಟಿಗೆಗಳನ್ನು ತನ್ನ ಮನೆಗೇ ಹಾಕಿಸಿಕೊಳ್ಳುತ್ತಾನೆ."

ನಿನ್ನೆ ಕಂಡ ಕುರಿ ಮಂದೆಯಲ್ಲಿ ಈಗ ಒಂದೊಂದೇ ವ್ಯಕ್ತಿಗಳನ್ನು ಗುರುತಿಸುತ್ತಿದ್ದಂತೆ ಅನ್ನಿಸಿತು. ಆದರೂ ಅವರ ಸುಖ ದುಃಖಗಳೆಲ್ಲ ಒಂದೇ ರೀತಿಯ ಮೂಸೆಯಲ್ಲಿ ಆಕಾರ ಪಡೆದುಕೊಂಡಂಥವು. ಬೇರೆ ಬೇರೆ ಪದಗಳಲ್ಲಿ ಅವರನ್ನವರು ಹೇಗೆ ತಾನೆ ವರ್ಣಿಸಿ ಕೊಂಡಾರು? ಅವರ ದುಃಖಗಾಥೆಗಳೆಲ್ಲ ಘೋಷಣೆಯಲ್ಲಿಯೇ ಕೊನೆಗಾಣುತ್ತಿತ್ತು.

ಮಾರನೇ ದಿನ ಜಾಥಾ ಆರಂಭವಾಗಲಿತ್ತು. ನಾವು ತಾಲೂಕಾಫೀಸಿನವರೆಗೆ ಕಾಲ್ನಡಿಗೆಯಲ್ಲಿ ಹೋಗುವವರಿದ್ದೆವು. ಮಹಿಳೆಯರೇ ಮುಂಚೂಣಿಯಲ್ಲಿದ್ದರು. ಬಾಂಬೆಯಲ್ಲಿ ಹೋರಾಟದ ಮೆರವಣಿಗೆಗಳನ್ನು ರಸ್ತೆ ಬದಿಯಲ್ಲಿ ನಿಂತು ನೋಡಿದ್ದೆ. ಈಗ ನಾನೆ ಅದರ ಭಾಗವಾಗಿದ್ದೆ. ಒಂದರ್ಥದಲ್ಲಿ ಇದೊಂದು ದೊಡ್ಡ ಗುಂಪು. ಆದರೆ ದಿಕ್ಕಿರದ ಕುರಿಗಳ ಹಿಂಡಲ್ಲ. ಈ ಗುಂಪು ತನ್ನ ಗುರಿಯನ್ನು ಸ್ಪಷ್ಟವಾಗಿ ವ್ಯಾಖ್ಯಾನಿಸಿಕೊಂಡಿತ್ತು. ಘೋಷಣೆಗಳಲ್ಲಿ ಪೊಳ್ಳುತನ ತೋರಿ ಬರುತ್ತಿರಲಿಲ್ಲ. ಅವರ ಮುಚ್ಚಿದ ಮುಷ್ಟಿಗಳಲ್ಲಿ ಜೀವನದ ಸಾರ ಕಾಣುತ್ತಿತ್ತು. ಆ ಗಟ್ಟಿ ದನಿ ಮಹಿಳೆಯರ ಆಸ್ತಿಯಾಗಿತ್ತು. ಅದೊಂದೇ ಅವರ ಅಸ್ತಿತ್ವದ ಕುರುಹೆಂಬಂತಿತ್ತು. ಆ ಹೊತ್ತಿಗೆ ಇರುವೆಯ ಸಾಲಿನಿಂದ ರಕ್ತ ಮಾಂಸಗಳಿಂದ ತುಂಬಿರುವ ಮನುಷ್ಯರಾಗಿ ಪರಿವರ್ತಿತ ಗೊಂಡಿದ್ದರು.

ಇಂತಹ ಹೊಯ್ದಾಡುತ್ತಿರುವ ಮನಸ್ಥಿತಿಯಲ್ಲಿ ನಾನು 4 ದಿನಗಳಿಂದ ಅವರನ್ನು ನೋಡುತ್ತಿದ್ದೆ. ಅವರ ಕುಣಿತ ಇನ್ನೂ ಮುಂದುವರೆದಿತ್ತು. ನಾನು ತೀರ ದಣಿದಿದ್ದೆ. ನಾನು ನನ್ನ ದಿನವನ್ನು ಮುಗಿಸಿದ್ದರೂ ಅವರು ಕುಣಿಯುತ್ತಲೇ ಇದ್ದರು. ಬಹುಶಃ ರಾತ್ರಿ ತಡ ಹೊತ್ತಿನವರೆಗೂ ನೃತ್ಯ ಹಾಡು ಮುಂದುವರೆದಿರಬೇಕು. ಆದರೂ ನಾನು ಬೆಳಿಗ್ಗೆ ಏಳುವಾಗ ಎಲ್ಲರೂ ಆಗಲೇ ಎದ್ದು ತಯಾರಾಗಿ ಮೈದಾನದಲ್ಲಿ ಹಾಜರಿದ್ದರು.

ಆ ಪತ್ರ ಬಂದಾಗಿನಿಂದ ನನ್ನ ಉತ್ಸಾಹವೆಲ್ಲ ನಿಧಾನಕ್ಕೆ ಕರಗುತ್ತಿತ್ತು. ಮಾರನೇ ದಿನ ಬಾಂಬೆಯಲ್ಲಿರಲು ನಾನು ಆ ರಾತ್ರಿಯೇ ಹೊರಡಬೇಕಿತ್ತು. ಒಳಗೊಳಗೇ ಕುದಿಯುತ್ತಿದ್ದರೂ ಸಂಪೂರ್ಣ ಅಸಹಾಯಕಳಾಗಿದ್ದೆ.

ತರಗತಿಗಳು ಶುರುವಾದವು. ಇವರ್ಯಾರೂ ಹಿಂದೆಂದೂ ಯಾವುದೇ ರೀತಿಯ ಶಿಕ್ಷಣ ಪಡೆದವರೇ ಅಲ್ಲ. ಆದರೂ ಎರಡು ಗಂಟೆಗಳ ತರಗತಿಯಲ್ಲಿ ಮುಗ್ಧ ಕಣ್ಣುಗಳನ್ನು ನಮ್ಮೆಡೆಗೆ ತಿರುಗಿಸುತ್ತಾ, ಅವರಿಗೆ ಗೊತ್ತಿರುವ ಸಂಗತಿಗಳ ಪ್ರಸ್ತಾಪವಾದಾಗ ತಲೆ ಅಲ್ಲಾಡಿಸುತ್ತಾ ಕುಳಿತಿದ್ದರು. ಪ್ರತಿಯೊಬ್ಬರೂ ತಮ್ಮ ತಮ್ಮ ಹಳ್ಳಿಯ ಕತೆಗಳನ್ನು ಹೇಳಲು ಉತ್ಸುಕರಾಗಿದ್ದರು. ಕುರಿ ಮಂದೆಯಿಂದ ಒಂದೊಂದೇ ವ್ಯಕ್ತಿತ್ವ ನನ್ನೆದುರು ರೂಪು ಪಡೆಯುತ್ತಿತ್ತು.

ಸುಮಾರು ಮಧ್ಯಾಹ್ನ 12 ಗಂಟೆಯ ಸಮಯ. ಎಲ್ಲರೂ ತರಗತಿಗಳು ಮುಗಿದು ಊಟಕ್ಕೆ ಕರೆ ಬರುವುದನ್ನೇ ಕಾಯುತ್ತಿದ್ದರು. ಆಗ ಎಳೆಯ ಹೆಂಗಸೊಬ್ಬಳು ಏದುಸಿರು ಬಿಡುತ್ತಾ ಬರಿಗಾಲಲ್ಲಿ ಓಡೋಡಿ ಬಂದಳು. ಅವಳ ಮುಖದಿಂದ ಬೆವರಿಳಿಯುತ್ತಿತ್ತು. ಅವಳ ಕೈಯಲ್ಲೊಂದು ಚೀಲವಿತ್ತು. "ಇವಳೇ ಭೂರಿಭಾಯಿ. ಭೂರಿಬಾಯಿ ಬಂದಳು" ಎಂಬ ಪಿಸು ದನಿ ಹರಡಿತು. ಕಾರ್ಯಕರ್ತೆ ಕೇಳಿದಳು "ಯಾಕಿಷ್ಟು ತಡ ಭೂರಿಬಾಯಿ? ಕ್ಯಾಂಪ್ ನಿನ್ನೆಯೇ ಶುರುವಾಯಿತು"


ಇದ್ದಕ್ಕಿದ್ದಂತೆ ತಡೆ ಹಿಡಿದಿದ್ದ ಕಣ್ಣೀರಿನ ಕಟ್ಟೆ ಒಡೆಯಿತು. ತನ್ನೆರಡೂ ಕೈಗಳನ್ನು ಮುಂದೆ ಚಾಚಿದಳು. ಆ ಕೈಗಳು ಸುಟ್ಟ ಹಸಿ ಗಾಯಗಳಿಂದ ತುಂಬಿ ಹೋಗಿತ್ತು. "ಇವತ್ತು ನನ್ನ ಮೈದುನನ ಮದುವೆ. ನಾನು ನಿನ್ನೆಯೇ ಇಲ್ಲಿಗೆ ಬರಲು ನನ್ನ ಚೀಲ ತುಂಬಿಸಿಟ್ಟಿದ್ದೆ. ಆದರೆ ನನ್ನ ಮಾವ ನನ್ನ ಹೋಗಗೊಡಲಿಲ್ಲ. ನಾನು ಹಠ ಹಿಡಿದೆ. ಕೋಪಗೊಂಡ ಅವರು ರಾತ್ರಿ ತವಾ ಕಾಯಿಸಿ ನನ್ನ ಕೈಗಳನ್ನು ಸುಟ್ಟರು. ರಾತ್ರಿಯೆಲ್ಲ ಕಣ್ಣು ಮುಚ್ಚಲಾಗದಷ್ಟು ಉರಿಯುತ್ತಿತ್ತು. ಬೆಳಿಗ್ಗೆ ಬೇಗ ಎದ್ದು ಎಲ್ಲರೂ ಏಳುವ ಮುಂಚೆಯೇ ತಪ್ಪಿಸಿಕೊಂಡು ಬಂದುಬಿಟ್ಟೆ. ನನ್ನ ಹತ್ತಿರ ಬಿಡಿಗಾಸೂ ಇಲ್ಲದ್ದರಿಂದ ನಾಲ್ಕು ಮೈಲಿಯೂ ನಡೆದು ಬರಬೇಕಾಯ್ತು," ಭೂರಿಬಾಯಿ ಬಿಕ್ಕಳಿಸುತ್ತಲೇ ತನ್ನೆಲ್ಲ ಕತೆ ಹೇಳಿದಳು. ನನ್ನ ಕಣ್ಣರೆಪ್ಪೆಗಳಡಿ ನೀರು ತುಳುಕುತ್ತಿತ್ತು. ನನಗೆ ಬಂದ ಪತ್ರ ನೆನಪಾಯಿತು.. ಭೂರಿಬಾಯಿಗೆ ಹೀಗೆ ಮಾಡಲು ಇಷ್ಟೊಂದು ಧೈರ್ಯ ಎಲ್ಲಿಂದ ಬಂತು? ಅವಳಿಗೆ ಕ್ಯಾಂಪ್‌ಗೆ ಬರುವುದೇಕೆ ಅಷ್ಟೊಂದು ಮುಖ್ಯವಾಗಿತ್ತು. ನಾನು ಹೇಳಿಯೇಬಿಟ್ಟೆ, "ಭೂರಿಬಾಯಿ ನೀನು ಬರುವ ಅವಶ್ಯಕತೆಯಿರಲಿಲ್ಲ. ಕುಟುಂಬದವರ ಮದುವೆ ಮುಖ್ಯವಾದ ಶುಭ ಕಾರ್ಯ. ನೀನು ಅಲ್ಲಿಯೇ ಇರಬೇಕಿತ್ತು."

ಹಾಗೆ ಹೇಳ ಹೋದರೆ ನನಗೆ ಅವಳ ಮಾವನಿಗೆ ಹೇಗನ್ನಿಸಿರ ಬೇಕೆಂದು ಅರ್ಥವಾಗಿತ್ತು. ಆದರೆ ಭೂರಿಬಾಯಿ ಇದ್ದಕ್ಕಿದ್ದಂತೆ ಬೆಂಕಿಯಂತಾದಳು. "ಅಕ್ಕ !! ನೀವು ಯೂನಿಯನ್ ಕೆಲಸಕ್ಕೆ ಬರುವುದು ಬೇಕಿರಲಿಲ್ಲವೆಂದು ಹೇಳುತ್ತಿದ್ದೀರ?"

ನಾನು ಗರ ಬಡಿದಂತಾದೆ. ಇಂತೊಬ್ಬ ಅರಿಯದ ಅಶಿಕ್ಷಿತ ಮಹಿಳೆ ತನ್ನ ಬಂಧನಗಳನ್ನು ಮುರಿದು ಇಲ್ಲಿಗೆ ಬಂದಿದ್ದಳು. ಆ ಶಕ್ತಿ ಅವಳೊಳಗಿಂದ ಬಂದಿತ್ತು. ಸಂಜೆಯ ಹೊತ್ತಿಗೆ ಅವಳು ಉಳಿದ ಮಹಿಳೆಯರಲ್ಲೊಂದಾಗಿಬಿಟ್ಟಳು.

ನಾನು ತೀರ ಕುಗ್ಗಿದಂತೆನಿಸಿತು. ನಾಲ್ಕು ದಿನ ಅವರ ಬಡತನ, ಕಷ್ಟದ ಬದುಕನ್ನು ಕಾಣುತ್ತಾ ಬಂದಿದ್ದೆ. ಮಂದೆಯಲ್ಲಿ ವೈಯಕ್ತಿಕ ಮುಖಗಳನ್ನು ಗುರುತಿಸಲು ತೊಡಗಿದ್ದೆ. ಬೆಳಕಿನ ಕಿಡಿಗಳು ಬೆಳಕ ಹೊತ್ತಿಸಲು ಹಾತೊರೆಯುವುದ ಕಂಡಿದ್ದೆ. ಈ ಬೆಳಕಿನ ಕಿಡಿಗಳು ನನ್ನ ಹಳೆಯ ಬದುಕಿಗೆ ಬೆಂಕಿ ಹಚ್ಚುತ್ತಿದ್ದವು. ಆ ಬೆಂಕಿ ತಡೆಯಿಲ್ಲದೆ ಭಗ್ಗೆಂದು ಉರಿಯುತ್ತಿತ್ತು. ಹೊರಡುವ ಸಮಯ ಹತ್ತಿರವಾಗುತ್ತಿತ್ತು. ಕೋಪಿಷ್ಟ ಅತ್ತೆ, ಕರುಬುವ ಗಂಡ, ವ್ಯಂಗ್ಯವಾಡುವ ನಾದಿನಿ. ಎಲ್ಲರೂ ಅಸ್ಪಷ್ಟ ಆಕಾರಗಳಾಗಿ ಕಾಣುತ್ತಿದ್ದರು.. ಅವರ ಸುತ್ತ ಭೂರಿಬಾಯಿಯ ಕೈಗಳ ಮೇಲಿನ ಸುಟ್ಟ ಗಾಯಗಳು ನರ್ತಿಸುತ್ತಿತ್ತು.

ಆ ದಿನ ಮತ್ತೆ ಧೂಳಿನ ಬಿರುಗಾಳಿಯೆದ್ದಿತು. ಗಾಳಿಯ ಆವೇಗ ಹೆಚ್ಚುತ್ತಿತ್ತು.. ದೂಳು ಮೈಗೆ ಬಡಿಯುತ್ತಿತ್ತು. ನಾನು ತಾಪಿಯ ತಂಪಿನಲ್ಲಿ ಗಂಡನ ಕಾಗದವನ್ನು ಕೈಯಲ್ಲಿ ಹಿಡಿದು ನಿಂತಿದ್ದೆ. ಜಾಗರೂಕತೆಯಿಂದ ಅದನ್ನು ಸಣ್ಣ ತುಂಡುಗಳಾಗಿ ಹರಿದು ನೀರಿನಲ್ಲಿ ಬಿಟ್ಟೆ. ಆ ಚೂರುಗಳು ಅಲೆಗಳೊಂದಿಗೆ ಮೇಲೆ ಕೆಳಗಾಗುತ್ತಾ ತೇಲಿ ಹೋಯಿತು. ಮತ್ತೆ ನಾನು ನನ್ನೆಲ್ಲ ಬಂಧಗಳನ್ನೂ ಕಳಚಿ ನಿಂತಿದ್ದೆ. ಕೆಲ ಸಮಯದ ಮಟ್ಟಿಗಾದರೂ. ❑



ಅವನನ್ನು ಮದುವೆಯಾಗಿದ್ದಳವಳು
ಅವಳೇ ಪ್ರೀತಿಸಿದ್ದಳೋ ಅಥವಾ ಮನೆಯವರೇ
ಮಾಡಿಸಿದ್ದರೋ?
ಬಿಡಿ? ಸರಿಯಾಗಿ ನೆನಪಿಲ್ಲವದು..
ಆದರೆ ನೆನಪಿದೆ, ಆತನ ಮುಖದ ಮೇಲೆ ಮುಸುಕಿತ್ತು.
ನಕಾಶೆಯಲ್ಲಿ ಕಾಣದ ದಾರಿಗಳಲ್ಲಿ
ಆತನ ಕಿರುಬೆರಳು ಹಿಡಿದು ನಡೆದಿದ್ದಳು.
ಆಗ ಮುಸುಕು ಸರಿಸಿ ನೋಡಲು ನಾಚಿಕೆಯಾಗಿ
ತಲೆ ಬಗ್ಗಿಸಿದ್ದಳು.
ಇತಿಹಾಸದಲ್ಲಿ ದಾಖಲಾಗದ ನಗು, ನಿಟ್ಟುಸಿರು, ಮೈಥುನಗಳಲ್ಲಿ
ಜೊತೆಯಾಗಿದ್ದಳು,
ಆದರೂ ಮುಸುಕು ಸರಿಸಲಿಲ್ಲ.
ಅರೆ! ಸಮಯವೆಲ್ಲಿತ್ತು.
ಮಕ್ಕಳನ್ನು ನೋಡಬೇಡವೆ.
ಗುಲಾಬಿ ಗಿಡಕ್ಕೆ ನೀರೆರೆಯುವಾಗ, ಮಗಳ ಹೆರಿಗೆ
ಮಾಡಿಸುವಾಗ,
ಮಗನನ್ನು ವಿದೇಶಕ್ಕೆ ಕಳಿಸುವಾಗೆಲ್ಲ ಮುಸುಕಿನ ಬಗ್ಗೆ
ಯೋಚಿಸಿದ್ದಾಳೆ.
ಆದರೆ ಯಾಕೋ ಗೊತ್ತಿಲ್ಲ, ಮುಸುಕು ಸರಿಸಿ ಅವನ
ನೋಡಲಾಗಲಿಲ್ಲ.
ಕೊನೆಗೆ ಬೇಸತ್ತು ಆತನೇ ಕೇಳಿದ್ದ.
"ತೆಗೆದುಬಿಡಲೇ ಇದನ್ನ" ಎಂದು.
ಮುಖ ಕಪ್ಪಿಟ್ಟು, ಆತನ ದೂರ ತಳ್ಳಿ ಕಿರುಚಿದಳು.
"ದಮ್ಮಯ್ಯ ಬೇಡ ಬೇಡ"
ಭರಿಸಲಾಗದ ಭಯದಲ್ಲಿ ಮಲಗಿದಳು.
ಆತ ಆಕೆಯ ಮೇಲೆ ಮುಸುಕೆಳೆದ. ❑



ಮಾಸಿಕ ಪುಸ್ತಕ

ವಿಳಾಸ :
ನಮ್ಮ ಮಾನಸ
114/5, 9ನೇ ತಿರುವು, 2ನೇ ಮುಖ್ಯರಸ್ತೆ,
ಚಾಮರಾಜಪೇಟೆ
ಬೆಂಗಳೂರು - 560 018